BUDGET FOR 1957-58—GENERAL DISCUSSION

(Continued)

ಶ್ರೀ ಟಿ. ಮರಿಯಪ್ಪ (ಹಣಕಾಸಿನ ಇಲಾಖೆಯ ಮಂತ್ರಿಗಳು).—ಮಾನ್ಯ ಅಧ್ಯಕ್ಷರೇ, ಆಯುವ್ಯಯ ಪಟ್ಟಿಯಮೇಲೆ ಬಹಳ ವಿಪುಲವಾಗಿ ಚರ್ಚೆ ನಡೆದಿದೆ. ನನ್ನ ಮಾನ್ಯ ಸಹೋದ್ಯೋಗಿಗಳು ಅನೇಕ ಟೀಕೆಗಳಿಗೆ ಸಮಂಜಸವಾದ ಉತ್ತರ ಕೊಟ್ಟಿದ್ದಾರೆ. ಆಯುವ್ಯಯ ಪಟ್ಟಿಗೆ ಸಂಬಂಧಪಟ್ಟಹಾಗೆ ಮಾನ್ಯ ಸದಸ್ಯರು ಮಾಡಿರತಕ್ಕಂಥ ಟೀಕೆಗಳಿಗೆ ಉತ್ತರಕೊಡಬೇಕಾದದ್ದು ನನ್ನ ಪಾಲಿಗೆ ಬಿದ್ದಿದೆ. ಮೊದಲಲ್ಲಿ ನಾನು ಆಯುವ್ಯಯ ಪಟ್ಟಿಯನ್ನು ಈ ಸಭೆಯ ಮುಂದೆ ಇಡುವಾಗ ಬಹಳ ವಿನಯಪೂರ್ವಕವಾಗಿ ಅರಿಕೆ ಮಾಡಿಕೊಂಡಿದ್ದೇನೆ. ಹೊಸರಾಜ್ಯವಾಗಿ ಮಹಾಚುನಾವಣೆಗಳಾದ ಮೇಲೆ ರಚಿತವಾಗಿರತಕ್ಕ ಈ ಸಭೆಯ ಮೇಲೆ ತುಂಬ ಜವಾಬ್ದಾರಿ ಇದೆ. ಐದು ಭಾಗಗಳೂ ಸೇರಿ ಒಂದು ರಾಜ್ಯವಾಗಿರುವಾಗ ಅನೇಕ ಹೊಸ ಸಮಸ್ಯೆಗಳು ಉದ್ಭವವಾಗಿವೆ. ಈ ಸಮಸ್ಯೆಗಳನ್ನು ಈ ಸಭೆಯ ಸದಸ್ಯರೆಲ್ಲರೂ, ಅವರು ಯಾವ ಪಕ್ಷಕ್ಕೇ ಸೇರಿರಲಿ, ಒಗ್ಗಟ್ಟಾಗಿ, ಒಂದುವೇಳೆ ಅವರ ಅಭಿಪ್ರಾಯ ಏನೇ ಇರಲಿ, ಇಡೀ ಜನತೆಯ ದೃಷ್ಟಿಯನ್ನು ಮನಸ್ಸಿನಲ್ಲಿಟ್ಟುಕೊಂಡು ಎದುರಿಸದೇ ಹೋದರೆ ಈ ಹೊಸ ರಾಜ್ಯವನ್ನು ಪುನರ್ ನಿರ್ಮಾಣ ಮಾಡತಕ್ಕದ್ದು ಬಹಳ ಕಷ್ಟವಾಗುತ್ತದೆ. ಐದು ಭಾಗಗಳಲ್ಲಿ ಒಂದೊಂದು ಭಾಗದಲ್ಲಿ ಒಂದೊಂದು ತರಹ ಸಮಸ್ಯೆಗಳು ಇವೆ, ಒಂದೊಂದು ತರಹ ನಡವಳಿಕೆಗಳು ಇವೆ. ಆಯಾ ಪ್ರದೇಶಗಳು ಬೆಳವಣಿಗೆ ಆಗಿರತಕ್ಕ ರೀತಿಯೇ ಬೇರೆ, ಕಾನೂನು ಕಟ್ಟಳೆಗಳೇ ಬೇರೆ. ಇವೆಲ್ಲವೂ ಸೇರಿ ಒಂದೇ ಒಂದು ರಾಜ್ಯ, ಒಂದೇ ಒಂದು ತರಹ ಕಾನೂನು, ಒಂದು ತರಹ ನಿಬಂಧನೆಗಳು ಮತ್ತು ಜನತೆ ಕೂಡ ಒಂದಾಗಿ ಹೊಂದಿಕೊಂಡುಹೋಗುವ ಸ್ಥಿತಿ ಉದ್ಭವವಾಗಿರುವಾಗ ಆ Broad outlines ಮೇಲೆ ಆದರೂ, ಈ ಸಭೆಯ ಸದಸ್ಯರೆಲ್ಲರೂ ಏಕೀಭವಿಸಿ ಕೆಲಸಮಾಡಬೇಕಾದದ್ದು ಬಹಳ ಅಗತ್ಯ ಎಂದು ಮನವಿಮಾಡಿಕೊಂಡಿದ್ದೇನೆ. ನಾನಾದರೂ ಎಲ್ಲ ಸದಸ್ಯರಿಂದಲೂ ನಿರೀಕ್ಷೆಮಾಡಿದ್ದೆ, ತುಂಬ ರಚನಾತ್ಮಕವಾದ ಸಲಹೆಗಳನ್ನು ಮಾಡಿ, ಆ ರಚನಾತ್ಮಕ ಸಲಹೆಗಳು ಅಂಗೀಕೃತವಾಗಿ ಧೈರ್ಯದಿಂದ, ದೃಢವಾಗಿ ಒಂದೊಂದು ಹೆಜ್ಜೆ ಮುಂದಿಟ್ಟುಕೊಂಡು ಹೋಗತಕ್ಕ ಒಂದು ಸಂದರ್ಭ ಒದಗಬೇಕು ಎನ್ನುವುದನ್ನು ನಿರೀಕ್ಷೆ ಮಾಡಿದ್ದೆ. ಅವರು ಅನೇಕ ಮಹನೀಯರು ಆ ವಿಷಯದಲ್ಲಿ ಸಲಹೆಗಳನ್ನು ಮಾಡಿದ್ದಾರೆ. ಅವರೆಲ್ಲರಿಗೂ ನಾನು ತುಂಬ ಋಣಿಯಾಗಿದ್ದೇನೆ. ಈ ಆಯುವ್ಯಯ ಪಟ್ಟಿಯನ್ನು ತಯಾರುಮಾಡುವಾಗ ಇರತಕ್ಕ ಕಷ್ಟಗಳನ್ನು ನಾನು ವಿವರವಾಗಿ ತಮಗೆ ತಿಳಿಸಿದ್ದೇನೆ. ಇದರಲ್ಲಿ ಉತ್ಪ್ರೇಕ್ಷೆ ಏನೂ ಇಲ್ಲ. ಎಷ್ಟೋ ಜನ ಸದಸ್ಯರು ಹೊಸದಾಗಿ ಇಲ್ಲಿಗೆ ಬಂದಾಗ ವಸತಿಗೆ ಎಷ್ಟು ಕಷ್ಟವಾಯಿತು ಎಂಬುದನ್ನು ತಿಳಿದುಕೊಂಡಿರುವಾಗ, ಈ ಒಂದು ದೊಡ್ಡ ರಾಜ್ಯವನ್ನು ಸ್ಥಾಪನೆ ಮಾಡಿದಾಗ ಎಷ್ಟು ಕಷ್ಟವಾಗಿರಬೇಕು ಎಂಬುದನ್ನು ಅವರು ಊಹಿಸಿಕೊಳ್ಳಬಲ್ಲರು. ಈ ಸಭೆಯಲ್ಲಿ ಅನುಭವಿಗಳು ಇದ್ದಾರೆ. ರಾಜಕೀಯದಲ್ಲಿ ಬಹಳ ದಿವಸದಿಂದ ಇದ್ದಂಥ ಮಹನೀಯರು ಇದ್ದಾರೆ; ಮತ್ತು ಇತರ ಕ್ಷೇತ್ರಗಳಲ್ಲೂ ಪರಿಶ್ರಮವಿರತಕ್ಕ ಮಾನ್ಯ ಮಹನೀಯರು ಇದ್ದಾರೆ. ಶ್ರೀ ಶಂಕರಪ್ಪನವರು ಹಳೆಯ ಮೈಸೂರು ಅಸೆಂಬ್ಲಿಯಲ್ಲಿ ಆಯುವ್ಯಯ ಪಟ್ಟಿಯನ್ನು ಸಭೆಯ ಮುಂದೆ ಮಂಡಿಸಿದ ಮೇಲೆ ಸದಸ್ಯರೆಲ್ಲರನ್ನೂ ಕರೆದು ಅದರಲ್ಲಿರತಕ್ಕ ವಿಷಯುವನ್ನು ಪರಿಷ್ಕಾರವಾಗಿ ತಿಳಿಸುತ್ತ ಇದ್ದರು ಎಂದು ಹೇಳಿದರು. ಒಪ್ಪಿಕೊಳ್ಳುತ್ತೇನೆ. ಈ ಆಯುವ್ಯಯ ಪಟ್ಟಿ ಎಂಬುದು ಬಹಳ ಜಟಿಲವಾದ ಡಾಕ್ಯುಮೆಂಟು. ಬರೀ ರಾಜಕೀಯ ಅನುಭವ ಇದ್ದರೆ ಸಾಲುವುದಿಲ್ಲ. ಇದರೊಳಗೆ ಏನು ತೊಡರು ಇದೆಯೋ ಅದನ್ನು ತಿಳಿದುಕೊಳ್ಳುವುದಕ್ಕೆ ಪ್ರಯತ್ನ ಮಾಡಬೇಕು; ಮತ್ತು ಅಭ್ಯಾಸ, ಅಧ್ಯಯನ ಎರಡೂ ಆಗಬೇಕು. ಹಾಗೆಯೇ ಈ ವಿಷಯದಲ್ಲಿ ಮಾತನಾಡುತ್ತೇವೆ ಎಂದರೆ ಬಹಳ ಕಷ್ಟವಾಗುತ್ತದೆ. ಶಂಕರಪ್ಪನವರು ಹೇಳಿದ್ದು ನಿಜ. ಒಪ್ಪಿಕೊಳ್ಳುತ್ತೇನೆ. ಮಾನ್ಯ ಸ್ನೇಹಿತರಾದ ಪುಟ್ಟರಾಮಯ್ಯವರು ಬಹಳ ಲೈಟ್ ಆಗಿ ತೆಗೆದುಕೊಂಡಿದ್ದೀರಿ ಎಂದು ಹೇಳಿದರು. ನಾನು ಹಾಗೆ ತಿಳಿದುಕೊಂಡಿಲ್ಲ. ಕೊನೆಯ ಪಕ್ಷ ವಿಷಯವನ್ನು ತಿಳಿದುಕೊಂಡು ಜನಸೇವೆ ಮಾಡುವುದಕ್ಕೆ ಬಹಳ ಆಸಕ್ತಿಯುಳ್ಳ ಅವರಂಥ ಒಬ್ಬ ಸದಸ್ಯರಾದರೂ ಇದ್ದಾರೆಯಲ್ಲಾ ಎಂದು ನನಗೆ ಬಹಳ ಸಂತೋಷವಾಯಿತು. ಇದರಲ್ಲಿ ತಪ್ಪೇನೂ ಇಲ್ಲ. ಪ್ರಜಾ ಪ್ರಭುತ್ವ ಯಶಸ್ವಿಯಾಗಬೇಕಾದರೆ ಸರ್ಕಾರದ ಕಾರ್ಯಕಲಾಪಗಳನ್ನು ಚೆನ್ನಾಗಿ ತಿಳಿದುಕೊಳ್ಳುವುದು ಉತ್ತಮ. ಅದರಲ್ಲೂ ಆಯುವ್ಯಯ ಪಟ್ಟಿಯನ್ನು ಚೆನ್ನಾಗಿ ತಿಳಿದುಕೊಂಡರೆ ಬಹಳ ಧೈರ್ಯವಾಗಿ ಸೇವೆ ಮಾಡುವುದಕ್ಕೆ ಸಾಧ್ಯವಾಗುತ್ತದೆ. ಬಡ್ಜೆಟ್ ಸಂಪೂರ್ಣವಾಗಿ ಅರ್ಥವಾಗದಿದ್ದರೆ ಬಹಳ ಕಷ್ಟವಾಗುತ್ತದೆ. ತಿಳಿದುಕೊಳ್ಳುವುದಕ್ಕೆ ಶಕ್ತಿ ಇರುವವರು ತಿಳಿದುಕೊಳ್ಳಲಿ, ತಿಳಿದುಕೊಳ್ಳದೆ ಇದ್ದವರಿಗೆ ಈ ವಿಷಯಗಳ ಪರಿಷ್ಕರಣವನ್ನು ಮಾಡುವುದಕ್ಕೆ ನಾನಂತೂ ಸಿದ್ಧವಾಗಿದ್ದೇನೆ. ಏಕೆಂದರೆ, ಶ್ರೀ ಪುಟ್ಟರಾಮಯ್ಯನವರು ಒಂದುಸಾರಿ ನಿಮ್ಮ ಕೈಯಲ್ಲಿ ಆಗದಿದ್ದರೆ ನಮಗೆ ಬಿಟ್ಟುಬಿಡಿ ಎಂದು ಹೇಳಿದರು. ಅದಕ್ಕಾದರೂ ಸಭೆಯವರು ತರಪೇತಾಗಬೇಕಲ್ಲ. ಆದ್ದರಿಂದ ಹಾಗೆ ತರಪೇತು ಮಾಡುವುದಕ್ಕೆ ಆಸಕ್ತಿ ಇರುವ ವಿಚಾರದಲ್ಲಿ ನನಗಂತೂ ಬಹಳ ಸಂತೋಷ; ನಮಗೆ ತಿಳಿಯದಿದ್ದರೆ, ತಿಳಿದವರ ಕೈಯಲ್ಲಾದರೂ ಪರಿಶ್ರಮ ಕೊಡಿಸುವುದು ಒಳ್ಳೆಯ ಕೆಲಸ. 'ಇಂಟ್ರಿಕೇಸೀಸ್ ಆಫ್ ದಿ ಬಡ್ಜೆಟ್' ತಿಳಿದುಕೊಳ್ಳುವುದು ಬಹಳ ಅಗತ್ಯ. 23 ವರ್ಷ ನಾನು ಈ ಸಭೆಗೆ ಮಣ್ಣುಹಾಕಿದ್ದೇನೆ. ಮೊದಲು ಬಹಳ ಕಷ್ಟ. ಒಂದೆರಡು ವರ್ಷ ಬಾಯಿಮುಚ್ಚಿಕೊಂಡು ಕುಳಿತಿರುತ್ತಿದ್ದೆವು. ಏನು ಹೇಳಿದರೆ ಹೇಗೆ ಆಗುತ್ತದೆಯೋ ಎಂದು. ಹಾಗೆ ಈ ಸಭೆಯ ಕಾರ್ಯಕಲಾಪಗಳಲ್ಲಿ ಸೇವೆಮಾಡಿ ಅಲ್ಪಸ್ವಲ್ಪ ತಿಳಿದುಕೊಂಡಿದ್ದೇನೆ. ಶ್ರೀ ಪುಟ್ಟರಾಮಯ್ಯನವರು ಇನ್ನೂ ಒಂದು ಮಾತು ಹೇಳಿದರು. ಲಘುವಾಗಿ ಮಾತನಾಡಿದರೋ, ಮನಃಪೂರ್ವಕವಾಗಿ ಮಾತನಾಡಿದರೋ ನಾನು ಹೇಳುವುದಿಲ್ಲ. ದೇಶದ ಖರ್ಚನ್ನು ಸಾಧ್ಯವಾದಷ್ಟು ಕಡಮೆ ಮಾಡಿದ್ದೇವೆ ಎಂದು ಆಗಲೇ ಹೇಳಿದೆ. ಎರಡು ಕೋಟಿ ರೂಪಾಯಿಗಳಷ್ಟು ಕಡಮೆ ಮಾಡಿದ್ದೇವೆ. ಇಂಟರಿಂ ಬಡ್ಜೆಟ್ಟಿಗೂ ಈ ಬಡ್ಜೆಟ್ಟಿಗೂ ಹೋಲಿಸಿದರೆ ಗೊತ್ತಾಗುತ್ತದೆ. ಫೈನಾನ್ಷಿಯಲ್ ಮೆಮೊರ್ಯಾಂಡಮನ್ನು ಸದಸ್ಯರು ಚೆನ್ನಾಗಿ ವಿಷಯಗಳನ್ನು ಗ್ರಹಿಸಲಿ ಎಂದು ಕೊಟ್ಟಿದ್ದೇವೆ. ಈ ಎರಡು ಕೋಟಿ ರೂಪಾಯಿಗಳನ್ನು ಉಳಿಸಬೇಕಾದರೆ ಎಷ್ಟು ಕಷ್ಟವಾಯಿತು ಎಂಬುದು ತಮಗೆ ಮನವರಿಕೆಯಾಗಿರಬೇಕು. ಕತ್ತರಿ ಹಾಕುವುದು ಸುಲಭ ಎಂದು ತಿಳಿದುಕೊಳ್ಳಬೇಡಿ. ಎಲ್ಲಾ ಇಲಾಖೆಗಳನ್ನೂ ಸಮನ್ವಯಮಾಡಿ ಅವರನ್ನು ಸಮಾಧಾನಪಡಿಸಿ ಅನಾವಶ್ಯಕವಾದಂಥ ಖರ್ಚು ಯಾವುದು ಎಂದು

(ಶ್ರೀ ಟಿ. ಮರಿಯಪ್ಪ)

ಪಟ್ಟಿಮಾಡಿ—ಎಲ್ಲಾ ಇಲಾಖೆಗಳಿಂದಲೂ ರೆಕಮಂಡೇಷನ್ ಬಂತು ಎಂದು ತಿಳಿದುಕೊಳ್ಳಬೇಡಿ—ಈ ಕ್ಯಾಬಿನೆಟ್‌ನವರು ಆರು ದಿವಸ ಒಂದೇ ಸಮವಾಗಿ ಕುಳಿತು ಮಹಾ ಚುನಾವಣೆಗೆ ಮೊದಲು ಈ ಸಭೆಗೆ ಖರ್ಚು ಕಡಮೆ ಮಾಡುತ್ತೇವೆಂದು ಏನು ವಾಗ್ದಾನ ಮಾಡಿದ್ದೆವೋ ಅದನ್ನು ಉಳಿಸಿಕೊಳ್ಳುವುದಕ್ಕೆ ಖರ್ಚಿನಲ್ಲಿ ಬಹುಮಟ್ಟಿಗೆ ಕಡಮೆಮಾಡಿದ್ದೇವೆ. ಆದರೆ ಎಲ್ಲವನ್ನೂ ಮಂತ್ರಿಗಳೇ ಕುಳಿತುಕೊಂಡು ಕಡಮೆ ಮಾಡಬೇಕಾದರೆ ಕಷ್ಟವಾಗುತ್ತದೆ. ಅದಕ್ಕೇ ಅನುಭವವಿರತಕ್ಕ ಒಬ್ಬ ಅಧಿಕಾರಿಯನ್ನು ಅಥವಾ ಪ್ರವೀಣರನ್ನು ನೇಮಿಸಬೇಕೆಂದು ಮೊನ್ನೆ ಹೇಳಿದ್ದೇನೆ; ಮತ್ತು ಯಾವಾಗಲೂ ಈ ವಿಚಾರದಲ್ಲಿ ಎಚ್ಚರಿಕೆಯಿಂದ ಇರುತ್ತೇವೆ ಎಂತಲೂ ಹೇಳಿದ್ದೇನೆ. ಇನ್ನೊಂದು ಮಾತನ್ನು ಹೇಳಿದರು: ಮರಿಯಪ್ಪನವರು ಎಕ್ಸ್‌ಪರ್ಟ್ ಅಲ್ಲ, ಎಕ್ಸ್‌ಪರ್ಟ್ ಆದವರನ್ನು ಫೈನಾನ್ಸ್ ಮಿನಿಸ್ಟರ್ ಆಗಿ ನೇಮಕಮಾಡಬೇಕೆಂದು ಹೇಳಿದರು. ಒಪ್ಪಿಕೊಳ್ಳುತ್ತೇನೆ. ಇದಕ್ಕೆ ಎಕ್ಸ್‌ಪರ್ಟೇ ಆಗಬೇಕಾಗಿಲ್ಲ. ಎಕ್ಸ್‌ಪರ್ಟ್ಸ್ ಇರುತ್ತಾರೆ. ಅವರೆಲ್ಲರೂ ಪರ್ಮನೆಂಟ್ ಸರ್ವಿಸ್ಸಿನಲ್ಲಿ ಇರುತ್ತಾರೆ. ನಮ್ಮ ಅದೃಷ್ಟವೋ, ದುರದೃಷ್ಟವೋ, ಸೌಭಾಗ್ಯವೋ, ದೌರ್ಭಾಗ್ಯವೋ ಪ್ರಜಾಪ್ರಭುತ್ವ ಸ್ಥಾಪನೆ ಆದಮೇಲೆ ಯಾರು ಬೇಕಾದರೂ ಮಂತ್ರಿ ಆಗಬಹುದು. ಪರಿಶ್ರಮ ಇಲ್ಲದೆ ಸರ್ಕಾರ ನಡೆಸಬಹುದು ಎಂದು ತಾವು ಮನಸ್ಸಿನಲ್ಲಿಟ್ಟುಕೊಂಡಿದ್ದರೆ ಅದರಿಂದೇನಾಗುತ್ತದೆ ಎಂದು ಸ್ನೇಹಿತರಿಗೆ ಉತ್ತರ ಹೇಳಬಹುದು. ಆದ್ದರಿಂದ ಇದನ್ನು ಲಘುವಾಗಿ ನಾವೂ ನೀವೂ ಯಾರೂ ಭಾವಿಸಬಾರದು. ದೇಶದ ಹೊರೆ ನಮ್ಮ ಮೇಲೆ ಎಷ್ಟಿದೆಯೋ ನಿಮ್ಮ ಮೇಲೂ ಅಷ್ಟೇ ಇದೆ. ಈ ದಿವಸ ನಾವು ಸರ್ಕಾರ ನಡೆಸುತ್ತಾ ಇದ್ದೇವೆ. ಇದಕ್ಕೆ alternate Government ಸ್ಥಾಪನೆ ಮಾಡಬೇಕಾದರೆ ಇಷ್ಟೇ ಜವಾಬ್ದಾರಿ ನಮ್ಮಲ್ಲಿ ಇರಬೇಕು. ಆದ್ದರಿಂದ ವಿರೋಧಪಕ್ಷದವರಲ್ಲಿ ಬಹಳ ವಿನಯದಿಂದ ಪ್ರಾರ್ಥನೆಮಾಡಿಕೊಳ್ಳುತ್ತೇನೆ. ಆ ಜವಾಬ್ದಾರಿಯನ್ನು ಹೊರುವುದಕ್ಕೆ ಸಿದ್ಧತೆ ಎಷ್ಟು ಜಾಗ್ರತೆ ಆದರೆ ಅಷ್ಟೂ ನಮಗೆ ಸಂತೋಷ, ಆಗಲೇ ಡೆಮಾಕ್ರಸಿ ಜಯಪ್ರದವಾಗಬೇಕಾದರೆ. ಆ ದೃಷ್ಟಿಯಿಂದ ಲಘುವಾಗಿ ಮಾತನಾಡುವುದನ್ನು ಬಿಟ್ಟುಬಿಟ್ಟರೆ ತಮಗೂ ಭೂಷಣ ನಮಗೂ ಭೂಷಣ. ಈ ವಿಷಯವನ್ನು ತಮಗೆ ವಿನಯದಿಂದ ಏಕೆ ಅರಿಕೆಮಾಡಿಕೊಳ್ಳುತ್ತೇನೆ ಎಂದರೆ, ಈ ಆಯವ್ಯಯಪಟ್ಟಿಯ ಮೇಲೆ ಮಾಡಿರತಕ್ಕ ಟೀಕೆಗಳಲ್ಲಿ ಕೆಲವು ಲಘುವಾಗಿವೆ. ತಾವು ಇದನ್ನು ಆಳವಾಗಿ ನೋಡಿ, ಇಂಥಿಂಥ ವಿಷಯದಲ್ಲಿ ಹೀಗೆ ಮಾಡಬಹುದಾಗಿತ್ತು ಎಂದು ಹೇಳುವ ಸೂಚನೆಗಳು ಬಹಳ ಕಡಮೆಯಾಗಿ ಬಂದಿವೆ.

Mr. SPEAKER.—The House will now adjourn and meet again at 10-30 A.M.

The House adjourned at Ten of the Clock and re-assembled at Thirty Minutes past Ten of the Clock.

[Mr. SPEAKER in the Chair.]

ಶ್ರೀ ಟಿ. ಮರಿಯಪ್ಪ.—ಮಾನ್ಯ ಅಧ್ಯಕ್ಷರೇ, ನಾನು ಈ ಸಭೆಗೆ ಮನವಿಮಾಡಿಕೊಂಡ ಹಾಗೆ, ಆಯವ್ಯಯ ಪಟ್ಟಿಯ ಮೇಲಿನ ಚರ್ಚೆಯಲ್ಲಿ ಭಾಗವಹಿಸಿದಂಥ ಎಲ್ಲ ಸದಸ್ಯರಿಗೂ ನನ್ನ ಧನ್ಯವಾದಗಳನ್ನರ್ಪಿಸುತ್ತೇನೆ. ಅನೇಕ ಸದಸ್ಯರು ಅನೇಕ ರೀತಿಯ ರಚನಾತ್ಮಕ ಸಲಹೆಗಳನ್ನು ಕೊಟ್ಟಿದ್ದಾರೆ. ಆದರೆ ನಾನು ಒಂದು ಮನವಿಯನ್ನು ಮಾಡಿಕೊಳ್ಳದೆ ವಿಧಿಯಿಲ್ಲ. ಹಳೆಯ ಮೈಸೂರಿನ ವಿಷಯಗಳನ್ನು ಮನಸ್ಸಿನಲ್ಲಿಟ್ಟುಕೊಂಡು, ಆ ವಿಷಯಗಳನ್ನು ಪದೇಪದೇ ಈ ಸಭೆಯಲ್ಲಿ ಪ್ರಸ್ತಾಪ ಮಾಡದೇ ಇದ್ದರೆ ಉತ್ತಮವೆಂದು ಮನವಿಮಾಡಿಕೊಳ್ಳುತ್ತೇನೆ. ಈಗ ಇರತಕ್ಕದ್ದು ಹೊಸರಾಜ್ಯ. ಹೊಸ ರಾಜ್ಯದಲ್ಲಿ ರಚಿತವಾಗಿರಕ್ಕ ಈ ಸರ್ಕಾರದವರು, ಕಾನೂನು ಪ್ರಕಾರ ಮಾತನಾಡಬೇಕಾದರೆ, ಆಯಾ ಭಾಗಗಳಲ್ಲಿ ಏನೇನು ನಡೆದಿದ್ದರೂ ಅದಕ್ಕೆ ಜವಾಬ್ದಾರರಲ್ಲ, ಅದು ಅನಾವಶ್ಯಕವಾದ ಪ್ರಸ್ತಾಪವಾಗುತ್ತದೆಂದು ಮಾತ್ರ ಹೇಳುತ್ತೇನೆ. ಆ ವಿಷಯವನ್ನು ಪದೇಪದೇ ಪ್ರಸ್ತಾಪ ಮಾಡಬಾರದು. ಅದರಿಂದ ಪ್ರಯೋಜನವಾಗುವುದಿಲ್ಲವೆಂದು ಹೇಳುತ್ತೇನೆ. ಎರಡನೆಯದು, ಏನೆಂದರೆ,—ಅದನ್ನು ಬಹಳ ವಿನಯದಿಂದ ಈ ಸಭೆಯಲ್ಲಿ ಪ್ರಾರ್ಥನೆ ಮಾಡಿಕೊಳ್ಳುತ್ತೇನೆ—ಚುನಾವಣೆಗಳು ನಡೆದ ಮೇಲೆ ಆ ವಿಷಯವನ್ನು ಮನಸ್ಸಿನಲ್ಲಿಟ್ಟುಕೊಂಡು ಟೀಕೆಮಾಡತಕ್ಕದ್ದು ಅಷ್ಟೊಂದು ರಚನಾತ್ಮಕವಾಗುವುದಿಲ್ಲವೆಂದು ನಾನು ಮನವಿ ಮಾಡಿಕೊಳ್ಳುತ್ತೇನೆ. ಪ್ರಜಾಪ್ರಭುತ್ವಸಂಪ್ರದಾಯದ ಮೇಲೆ ಚುನಾವಣೆಗಳು ನಡೆಯುತ್ತವೆ. ಚುನಾವಣೆಗಳಲ್ಲಿ ಅವರು ತಪ್ಪು ಮಾಡಿದ್ದಾರೆ, ಇವರು ತಪ್ಪು ಮಾಡಿದ್ದಾರೆ ಎಂದು ಈ ಸಭೆಯಲ್ಲಿ ಚರ್ಚೆ ಮಾಡುವುದರಿಂದ ಏನೂ ಪ್ರಯೋಜನವಾಗುವುದಿಲ್ಲ. ಕಾನೂನಿನಲ್ಲಿ ಬೇರೆ ಬೇರೆ ವಿಧಾಯಕವಾದ ಕಾರ್ಯಕ್ರಮಗಳಿವೆ. ಅದರಂತೆ ಕಾರ್ಯಕ್ರಮ ತೆಗೆದುಕೊಳ್ಳುವುದಕ್ಕೆ ಯಾರೇ ಆಗಲಿ, ಚುನಾವಣೆಗಳಲ್ಲಿ ಭಾಗವಹಿಸಿರುವವರಿಗೆ ಸಂಪೂರ್ಣವಾದ ಅವಕಾಶವಿದೆ. ಸರ್ಕಾರದವರ ಗಮನವನ್ನು ಸೆಳೆಯುವುದಕ್ಕೆ ಎಷ್ಟು ಮಟ್ಟಿಗೆ ಬೇಕೋ ಅಷ್ಟನ್ನು ಮಾತ್ರ ಹೇಳಿದ್ದರೆ ಸಾಕಾಗುತ್ತಿತ್ತು. ಮೂರನೆಯದಾಗಿ ಇನ್ನೊಂದು ಮನವಿಯನ್ನು ಮಾಡಬೇಕೆಂದಿದ್ದೇನೆ. ಆಯವ್ಯಯ ಪಟ್ಟಿಯ ಮೇಲೆ ಒಬ್ಬೊಬ್ಬರು ಸದಸ್ಯರು ಬಹಳ ದೂರದರ್ಶಿತ್ವದಿಂದ ಮಾತನಾಡಿದ್ದಾರೆ; ಸರ್ಕಾರದ ನೀತಿಯನ್ನು ಬಹಳವಾಗಿ ಟೀಕಿಸಿದ್ದಾರೆ. ಈ ಆಯವ್ಯಯ ಪಟ್ಟಿಯನ್ನು ರಚಿಸಬೇಕಾದರೆ ಯಾವ ಯಾವ ನೀತಿಯನ್ನು ಅನುಸರಿಸಿದೆ ಎಂದು ನನ್ನ ಭಾಷಣದಲ್ಲಿ ನಾನು ಸ್ಪಷ್ಟವಾಗಿ ಹೇಳಿದ್ದೇನೆ. All these are reflected in the Budget ಎಂದು ಕೊನೆಯಲ್ಲಿ ಹೇಳಿದ್ದೇನೆ; ಆಮೇಲೆ ಆಯವ್ಯಯವನ್ನು ಮಂಡಿಸಿದ್ದೇನೆ. ಮಹಾಚುನಾವಣೆಯಾದ ಮೇಲೆ, ಹೊಸ ಸಭೆ ರಚನೆಯಾದ ಮೇಲೆ, ಅನೇಕ ಭಾಗಗಳಿಂದ ಸದಸ್ಯರು ಬಂದಿದ್ದಾರೆ. ತತ್ಪೂರ್ವ ಆ ಸದಸ್ಯರೆಲ್ಲ ಒಂದೊಂದು ಬೇರೆ ಬೇರೆ ಆಡಳಿತಕ್ಕೊಳಪಟ್ಟಿದ್ದರು. ಅಲ್ಲಿ ಯಾವ ಯಾವ ತರಹ ನಡೆಯುತ್ತಿತ್ತು ಎಂಬುದು ಎಲ್ಲರಿಗೂ ಗೊತ್ತಿರುವುದಿಲ್ಲ. ಅದು ಆಯಾ ಪ್ರದೇಶದ ಆಡಳಿತದ ರೀತಿ, ಆಯಾ ಪ್ರದೇಶದಲ್ಲಿ ಆಡಳಿತ ನಡೆಸುತ್ತಿದ್ದ ಸರ್ಕಾರದವರ ನೀತಿ, ಮತ್ತು ಆಯಾ ಪ್ರದೇಶಗಳು ಹೇಗೆ ಅಭಿವೃದ್ಧಿಯಾಗಿವೆ, ಅವನ್ನೆಲ್ಲ ಅವಲಂಬಿಸಿರುತ್ತದೆ. ಹೊಸ ರಾಜ್ಯದಲ್ಲಿ ಹೊಸ ಸದಸ್ಯರು ಬಂದಮೇಲೆ ಈ ವಿಷಯಗಳನ್ನು ಮನದಟ್ಟಾಗುವಂತೆ ಹೇಳತಕ್ಕದ್ದು ಅತ್ಯಾವಶ್ಯಕವೆಂದು ಪರಿಗಣಿಸಿ ಆ ವಿಷಯಗಳನ್ನು ನನ್ನ ಭಾಷಣದಲ್ಲಿ ನಾನು ಸ್ಪಷ್ಟಪಡಿಸಿದ್ದೇನೆ. ನಿಜವಾಗಿ ಆಯವ್ಯಯ ಪಟ್ಟಿಯ ಮೇಲೆ ಚರ್ಚೆ ಇಷ್ಟು ದಿವಸ ನಡೆಯಬೇಕಾಗಿಲ್ಲ. ಎಲ್ಲ ಸಭೆಗಳಲ್ಲಿಯೂ ಮೂರು

ದಿವಸ ಮಾತ್ರ ಅವಕಾಶ ಕೊಡುತ್ತಾರೆ. Broad policies ಮೇಲೆ ನಮ್ಮ ಸದಸ್ಯರು ಮಾತನಾಡಿ ಸರಕಾರಕ್ಕೆ ದಾರಿ ತೋರಿಸಿದ್ದರೆ ಬಹಳ ಉತ್ತಮವಾಗುತ್ತಿತ್ತು. ಸ್ಥಳೀಯ ತೊಂದರೆಗಳನ್ನು ಹೇಳುವುದಕ್ಕೆ ಈ ಸಭೆಯಲ್ಲಿ ಅವಕಾಶವಿದೆ. ಬೇಡಿಕೆಗಳ ಮೇಲೆ ಚರ್ಚೆ ನಡೆಯುವಾಗ ಇಂಥ ವಿಷಯಗಳನ್ನು ಹೇಳಿದರೆ ಅದರ ಮೇಲೆ ಕಾರ್ಯಕ್ರಮ ತೆಗೆದುಕೊಳ್ಳುವುದು ಸರ್ಕಾರದವರ ಕರ್ತವ್ಯ : ಅವರು ಕಾರ್ಯಕ್ರಮ ತೆಗೆದುಕೊಳ್ಳುತ್ತಾರೆ. ಇದನ್ನು ನಾನು ಬಹಳ ವಿನಯದಿಂದ ಮನವಿ ಮಾಡಿಕೊಳ್ಳುತ್ತೇನೆ. ನೀವೂ ನಾವೂ ಸಹಕರಿಸಿ ಕೆಲಸ ಮಾಡಬೇಕು. ಹಾಗೆಂದ ಮಾತ್ರಕ್ಕೆ ನೀವು ಯಾವಾಗಲೂ ನಾವು ಹೇಳುವುದು ನಿಜವೆಂಬುದಾಗಿ ಹೇಳಬೇಕು ಎಂದು ಹೇಳುವುದಿಲ್ಲ. ಕಟುವಾಗಿ ಟೀಕೆಮಾಡಿ; ಆದರೆ, ರಚನಾತ್ಮಕ ಟೀಕೆಗಳಾದರೆ ನಮಗೆ ಬಹಳ ಸಹಾಯವಾಗುತ್ತದೆ ದೇಶಕ್ಕೆ ಸಹಾಯವಾಗುತ್ತದೆ. ಸೊಸೈಟಿಗೆ ವಿನಾಶಕಾರಿಯಾದರೆ ಅಂಥ ಟೀಕೆಗಳಿಂದ ತಮಗೂ ಉಪಯೋಗವಿಲ್ಲ, ನಮಗೂ ಉಪಯೋಗವಿಲ್ಲ. ಏನೋ ಒಂದು satisfaction ಬರಬಹುದು; ಚೆನ್ನಾಗಿ ಅಪ್ಪಳಿಸಿದೆ ಎಂಬ satisfaction ಬರಬಹುದೇ ಹೊರತು ಅದರಿಂದ ದೇಶಕ್ಕಾಗಲಿ, ನಿಮಗಾಗಲಿ, ನಮಗಾಗಲಿ ಅನುಕೂಲವಿರುವುದಿಲ್ಲ. ಆದರೆ ಅಂಥ cheap satisfaction ನಿಂದ ಸಂತೋಷ ಪಡುವವರು ಪಡಲಿ, ನಾವು ಸಾವಿರ ಉಳಿಪೆಟ್ಟು ತಿಂದಿದ್ದೇವೆ. ಹಿಂದಿನ ಸಭೆಗಳಲ್ಲಿ ಆಗುತ್ತಿದ್ದ ಚರ್ಚೆಗಳು ಬಹಳ ಕಠಿಣವಾಗಿರುತ್ತಿದ್ದವು. ಅದರಲ್ಲಿಯೂ irremovable executive ಇದ್ದಾಗ ಅವರು 20 ವರ್ಷ ಸರ್ವಿಸ್‌ಮಾಡಿ ಅಸಿಸ್ಟೆಂಟ್ ಕಮೀಷನರ್ ಆಗಿ ಸೇರಿ ಮೇಲಕ್ಕೆ ಬಂದಿರುತ್ತಿದ್ದರು, ಅಮಲ್ದಾರರಾಗಿ ಸೇರಿ ಮೇಲಕ್ಕೆ ಬಂದಿರುತ್ತಿದ್ದರು, ಅವರಿಗೆ ಅನುಭವಿತ್ತು ಮತ್ತು ಪರಿಶ್ರಮದಿಂದ ಓದಿಕೊಂಡು ಬರುತ್ತಿದ್ದರು. ಅವರನ್ನು ನಾವುಗಳು ಅಪ್ಪಳಿಸಿ ನೋಡಿದ್ದೇವೆ ; ನಾವು ಏಟು ತಿಂದಿದ್ದೇವೆ. ಆದುದರಿಂದ ತಾವೂ ಹಾಗೆ ಮಾಡಿದರೆ ನಮಗೆ ಬಹಳ ಅನುಕೂಲವಾಗುತ್ತದೆ. ಪ್ರತಿಯೊಂದು ಕಡೆಯೂ ಏನೇನು ನ್ಯೂನಾತಿರಿಕ್ತಗಳಿವೆ, ಸರ್ಕಾರದವರು ಏನೊಂದು ತತ್ವವನ್ನವಲಂಬಿಸಿದ್ದಾರೆ, ಹೇಗೆ, ಎಂದು ತಾವು ವಿಮರ್ಶಾತ್ಮಕ ದೃಷ್ಟಿಯಿಂದ ಆಳವಾಗಿ ಪರಿಶೀಲನೆ ಮಾಡಿದರೆ ನಮ್ಮನ್ನು ಹಿಡಿದುಕೊಳ್ಳುವುದಕ್ಕೆ ಕಷ್ಟವಾಗುವುದಿಲ್ಲ. ನಮ್ಮನ್ನು ಹಿಡಿದುಕೊಳ್ಳುವುದಕ್ಕೆ ಸಾಧ್ಯವಾಗಲಿಲ್ಲವಲ್ಲ ಎಂದು ಪರಿತಪಿಸುತ್ತೇವೆ. ಏಕೆಂದರೆ, ಈ ಎಲ್ಲ ಧಾರ್ಷ್ಟ್ಯವೂ ನಮಗಿದೆ ಎಂದು ಹೇಳುವ ಧೂರ್ತರಲ್ಲ ನಾವು. ಇಷ್ಟನ್ನೂ ಪೀಠಿಕಾರೂಪವಾಗಿ ನಾನು ಏಕೆ ಹೇಳುತ್ತಿದ್ದೇನೆಂದರೆ ಅತರಹ ಟೀಕೆಗಳು ಮೊದಲು ಬಂದುವು. ಮಾನ್ಯ ಸ್ನೇಹಿತರಾದ ಶ್ರೀ ಎಂ. ಸಿ. ನರಸಿಂಹನ್ ಅವರು ವಿಷಾದಾತ್ಮಕವಾದ ಬಡ್ಜೆಟ್ ಎಂದು ಹೇಳಿದರು. ಅವರು elaborate ಮಾಡಿ ಯಾವ ಯಾವ policyಯಿಂದ ಹಾಗೆ retrogade ಆಗಿದೆ ಎಂದು ತೋರಿಸಿದ್ದರೆ ಬಹಳ ಸಂತೋಷಪಡುತ್ತಿದ್ದೆ. ಅವರು ಈ ಸಭೆಯ ಬಹಳ intelligent member. ಅವರು ಪ್ರಶ್ನೆಯನ್ನು ಕೇಳುವುದೇ ಆಗಲೀ, ಯಾವುದೇ ಆಗಲೀ ಸ್ವಲ್ಪ ಅಭ್ಯಾಸ ಮಾಡಿಕೊಂಡು ಬಂದು ಕೇಳುತ್ತಾರೆಂದು ಒಪ್ಪಿಕೊಳ್ಳುತ್ತೇನೆ. ಇಂಥವರು ಹೀಗೆ ಹೇಳಿದರಲ್ಲ ಎಂದು ನನಗೆ ವಿಷಾದವಾಗುತ್ತದೆ, ಈ ಬಡ್ಜೆಟ್ಟನ್ನು ವಿಷಾದಾತ್ಮಕವಾದುದು ಎಂದು ಹೇಳುವುದಕ್ಕಾಗುವುದಿಲ್ಲವೆಂದು ನಾನು ಸಮರ್ಥಿಸಬಲ್ಲೆ. ಇದು ಬಹಳ progressive budget ಎಂದು ಅನೇಕ ಮಾನ್ಯ ಸದಸ್ಯರು ಸಕಾರಣವಾಗಿ ತೋರಿಸಿದ್ದಾರೆ. ಆದರೆ ಒಂದು ವಿಷಯವನ್ನು ತಾವೂ ನಾನೂ ಇಬ್ಬರೂ ಪರಿಗಣಿಸಬೇಕು. ಸಂಸ್ಥಾನಕ್ಕೆ ಇರತಕ್ಕ ಆದಾಯವೆಷ್ಟು, ಇರತಕ್ಕ ಹೊಸ ಸಮಸ್ಯೆಗಳೇನು, ಅದಕ್ಕೆ ಎಷ್ಟೆಷ್ಟು ಹಣವನ್ನೊದಗಿಸಬೇಕು. ಹಾಗೆ ಒದಗಿಸುವುದರಲ್ಲಿ ಪ್ರಜಾಭ್ಯುದಯಕ್ಕೆ ಸಂಬಂಧಪಟ್ಟ ಕೆಲಸಕಾರ್ಯಗಳಿಗೆ ಒದಗಿಸತಕ್ಕ ಹಣದಲ್ಲಿ ಖೋತಾ ಮಾಡಿದ್ದಾರೆಯೇ, ಅಥವ ಸರ್ಕಾರದವರು ಹಣವನ್ನೊದಗಿಸಲು ಹಿಂದು ಮುಂದು ನೋಡಿದ್ದಾರೆಯೇ ಎಂದು ವಿಚಾರಮಾಡಿ ತಾವು ಇದು retrograde budget ಅಥವ ಈ ಬಡ್ಜೆಟ್ಟಿನಲ್ಲಿ ತಪ್ಪು ಇದೆ ಎಂದು ಹೇಳಿದ್ದರೆ ಸಾಧುವಾಗುತ್ತಿತ್ತು. ಹಾಗೆ ಮಾಡದೆ, ಇರಲಿ ಒಂದು ಏಟು ಎಂದು ಬರೀ ವಿಷಾದಾತ್ಮಕವಾದ ಬಡ್ಜೆಟ್ ಎನ್ನುವುದರಿಂದ ಪ್ರಯೋಜನವಿಲ್ಲ. ಶ್ರೀ ವೈ. ವೀರಪ್ಪನವರು ಹೇಳಿದರು ಇದು tax-free budget ಅಲ್ಲ ಎಂದು. ನಾನು tax-free budget ಎಂದು ಹೇಳಿದ್ದೇನೆಯೇ? ಇಂಟೆರಿಂ ಬಜೆಟ್ಟಿನಲ್ಲಿ ಹನ್ನೊಂದು ಕೋಟಿ ಚಿಲ್ಲರೆ ರೂಪಾಯಿಗಳ ಖೋತಾ ಇತ್ತು. ಎರಡು ಕೋಟಿ ರೂಪಾಯಿಗಳನ್ನು ಕಡಮೆಮಾಡಿ ಇನ್ನೂ ಕೆಲವು ಬಾಬುಗಳಿಗೆ ಹಣವನ್ನೊದಗಿಸಿ ಒಂಭತ್ತು ಕೋಟಿ ಚಿಲ್ಲರೆಗೆ ಇಳಿಸಿದ್ದೇವೆ. ಆದರೂ ಸಹ ಖರ್ಚನ್ನು ಇನ್ನೂ ಇಳಿಸುವುದಕ್ಕೆ ಸಾಧ್ಯವಿದ್ದರೆ ನಾವು ಪ್ರಯತ್ನ ಮಾಡುತ್ತೇವೆಂದು ಹೇಳಿದ್ದೇನೆ. ಅದರ ಜೊತೆಗೆ uniform taxation bill ತಂದರೆ ಸುಮಾರು ಮೂರು ಕೋಟಿ ರೂಪಾಯಿಗಳವರೆಗೂ ಈ ತೆರಿಗೆಗಳಿಂದ ಬರುತ್ತದೆ ಎಂದು ಹೇಳಿದ್ದೇನೆ.

ಆದುದರಿಂದ ಇದು ತೆರಿಗೆ ಇಲ್ಲದ ಆಯವ್ಯಯವೆಂದು ನಾನು ಹೇಳಿಲ್ಲ. ಹೊಸ ತೆರಿಗೆಗಳನ್ನು ಮಾತ್ರ ಹಾಕಿಲ್ಲ ಅಷ್ಟೇ. ನಮ್ಮ ನೀತಿಗೆ ಅನುಗುಣವಾಗಿ ಹೊಸ ತೆರಿಗೆಯನ್ನು ಹಾಕದೆ ಈ ಆಯವ್ಯಯವನ್ನು ತಯಾರುಮಾಡಲಾಗಿದೆ. ಸದ್ಯಕ್ಕೆ ನಾನು ಸಮಯ ಕಾಯುತ್ತಿದ್ದೇನೆ. ಖೋತಾ ಬಜೆಟ್ಟನ್ನು ಸರಿತೂಗಿಸಬೇಕಾದರೆ ಸನ್ನಿವೇಶಕ್ಕೆ ಹೊಂದಿಕೊಂಡು ಹೋಗಬೇಕಾಗುತ್ತದೆ. ಈಗ ಹೊಸ ರಾಜ್ಯವಾಗಿದೆ. ಇದರ ಸಮಸ್ಯೆಗಳನ್ನು ಅರಿತುಕೊಂಡು ನಡೆಯಬೇಕಾಗುತ್ತದೆ. ಹೊಸ ರಾಜ್ಯಕ್ಕೆ ಅವಶ್ಯಕವಾಗಿರುವ ಬೇಡಿಕೆಗಳನ್ನು ಪೂರೈಸಬೇಕಾಗಿದೆ. ದೇಶಾಭಿವೃದ್ಧಿಯ ಕಾರ್ಯ ಸುಗಮವಾಗಿ ನಡೆಯುವಂತೆ ಮಾಡಬೇಕು. ದೇಶಾಭಿವೃದ್ಧಿಯ ಕಾರ್ಯಕ್ಕೆ ಅಡಚಣೆಗಳನ್ನುಂಟುಮಾಡತಕ್ಕ ಕಾಲವಿದಲ್ಲ. ಇಂದಿನ ಸಮಸ್ಯೆ ಕಠಿಣವಾಗಿದೆ. ಈಗಿನ ಪರಿಸ್ಥಿತಿಯಲ್ಲಿ ಇನ್ನೂ ಸಮಸ್ಯೆಗಳನ್ನು ತಂದು ಜನರ ಮನಸ್ಸನ್ನು ಕಲಕಬಾರದೆಂದು ಸಮಯ ಕಾಯುತ್ತಿದ್ದೇನೆ. ಈ ದೃಷ್ಟಿಯಿಂದ ಈಗ ಇರುವ ತೆರಿಗೆಯ ವಿಧಾನವನ್ನೇ ಸಮನ್ವಯಗೊಳಿಸುವುದರಿಂದ ಗೊಂದಲಗಳು ತಪ್ಪುವುದು. ಒಂದು ಉದಾಹರಣೆಯನ್ನು ಹೇಳುತ್ತೇನೆ. ಕೊಡಗಿನಲ್ಲಿ ಸದ್ಯಕ್ಕೆ ಸೇಲ್ಸ್ ಟಾಕ್ಸ್ ಇಲ್ಲ. ಹೊಸದಾಗಿ ಸೇಲ್ಸ್ ಟಾಕ್ಸ್ ಆ ಭಾಗದಲ್ಲಿ ಹಾಕಿದರೆ ಸ್ವಲ್ಪ ಹಣ ಜಾಸ್ತಿ ಬರುತ್ತದೆ. ಆಹಾರ ಧಾನ್ಯಗಳ ಮೇಲೆ ಮಾರಾಟ ತೆರಿಗೆ ಹಾಕಬಾರದೆಂದು ಎಲ್ಲರೂ ಹೇಳಿದ್ದಾರೆ. ಅದರಂತೆ ಆ ಸೂಚನೆಯನ್ನು ಅಂಗೀಕರಿಸಿ ಧಾರಣೆವಾಸಿ ಒಂದು ಮಟ್ಟಕ್ಕೆ ಬರುವವರೆಗೆ ಆಹಾರ ಪದಾರ್ಥಗಳ ಮೇಲೆ ತೆರಿಗೆ ಹಾಕುವುದಕ್ಕೆ ಇಷ್ಟಪಡಲಿಲ್ಲ. ಇದೇ ತೆರಿಗೆಯನ್ನು ಮದರಾಸು, ಆಂಧ್ರಪ್ರಾಂತಗಳಲ್ಲಿ ಹಾಕಿದ್ದಾರೆ. ಆದಕಾರಣ ಟೀಕೆ ಮಾಡುವಾಗ ಜವಾಬ್ದಾರಿಯನ್ನು ಅರಿತುಕೊಂಡು ಮರ್ಯಾದೆಯಿಂದ ಹೇಳಬೇಕು. ಇರುವ ಕಠಿಣ ಪರಿಸ್ಥಿತಿಯ ಅರಿವು ನಮಗೆ ಇರಬೇಕು.

(ಶ್ರೀ ಟಿ. ಮರಿಯಪ್ಪ.)

ನಾವು hard realities face ಮಾಡಬೇಕಾಗಿದೆ. Incidence of taxation ಮದರಾಸಿನಲ್ಲಿ ಮೈಸೂರಿಗಿಂತ ಹೆಚ್ಚಾಗಿದೆ. ಈ ದೃಷ್ಟಿಯಿಂದ ಎಲ್ಲ ಕಡೆಗೂ ತೆರಿಗೆಯನ್ನು ಸಮನ್ವಯಗೊಳಿಸಲೇಬೇಕು. ಸಮನ್ವಯವಾದರೇಯೆ ತೊಂದರೆಗಳು ತಪ್ಪುತ್ತವೆ. ಯಾರಾದರೂ ಇದನ್ನು ಸಮನ್ವಯಗೊಳಿಸಲೇಬೇಕು. ತಪ್ಪಿಸಲು ಸಾಧ್ಯವೇ ಇಲ್ಲ. ಮಾನ್ಯ ಸದಸ್ಯರಾದ ಶ್ರೀ ವೆಂಕಟೇಗೌಡರು ತೆರಿಗೆಯ ಬಗ್ಗೆ ಆಕ್ಷೇಪಣೆ ಮಾಡಿದರು. ಆದರೆ per capita taxation in South Kanara is very high. ಜಾಸ್ತಿ ಇದ್ದಕಡೆಗೆ ಕಡಮೆ ಹಾಗೂ ಕಡಿಮೆ ಇದ್ದಲ್ಲಿ ಜಾಸ್ತಿ ಮಾಡಲೇ ಬೇಕಾಗಿದೆ. There is no escape from it. ಆದುದರಿಂದ ಅರ್ಥವಿಲ್ಲದ ಟೀಕೆ ಮಾಡುವುದರಿಂದ ಯಾವ ಪ್ರಯೋಜನವೂ ಆಗುವುದಿಲ್ಲ. ಯಾವ ಯಾವುದನ್ನು ಸಮನ್ವಯಗೊಳಿಸಿ ಸರಿಯಾಗಿ ಮಾಡಬೇಕೆಂಬ constructive ಸೂಚನೆಗಳನ್ನು ಮಾಡಿದ್ದರೆ ಅದು ಮಾತ್ರ ಖಂಡಿತವಾಗಿ ಉತ್ತಮ ಟೀಕೆಯಾಗುತ್ತಿತ್ತು.

ಸ್ವಾಮಿ, ಇನ್ನೊಬ್ಬ ಸದಸ್ಯರು ಮಾತನಾಡುವಾಗ ನಮ್ಮ Cabinet ನಲ್ಲಿ industrialists, economists, doctors, businessmen ಮುಂತಾದವರನ್ನು ಏತಕ್ಕಾಗಿ ತೆಗೆದುಕೊಂಡಿಲ್ಲವೆಂದು ಆಕ್ಷೇಪಣೆ ಮಾಡಿದರು. ಪ್ರಜಾಪ್ರಭುತ್ವದಲ್ಲಿ ಇಂಥ ತಜ್ಞರನ್ನು ಸಚಿವ ಸಂಪುಟದಲ್ಲಿ ತೆಗೆದುಕೊಳ್ಳಲು ಆಗುವುದೆಂದು ಹೇಳುವುದಕ್ಕಾಗುವುದಿಲ್ಲ. United Kingdom ಅಲ್ಲಿಯೂ ಸಹ ಈರೀತಿಯಾಗಿ ಇರುವುದಿಲ್ಲ. ಯಾವದಾದರೂ ಒಂದು ವಿಷಯದಲ್ಲಿ ತಜ್ಞರಾಗಿದ್ದವರನ್ನು ಆ ಇಲಾಖೆಗೆ ಮಂತ್ರಿಯಾಗಿ ತೆಗೆದುಕೊಳ್ಳಬಾರದೆಂದು ಇದೆ. ಪ್ರಜಾಪ್ರಭುತ್ವದಲ್ಲಿ ಚುನಾವಣೆಯೊಳಗೆ ಜನತೆಯು ಯಾರನ್ನು ಆರಿಸಿ ಕಳಿಸಿಕೊಡುವುದೋ ಅಂಥವರನ್ನೊಳಗೊಂಡ ಸಚಿವ ಸಂಪುಟವನ್ನು ರಚಿಸಬೇಕಾಗುತ್ತದೆ. ಪ್ರತಿಯೊಂದು ವಿಷಯದಲ್ಲೂ ತಜ್ಞರಾದವರನ್ನೇ ಮತದಾರರು ಚುನಾವಣೆಯಲ್ಲಿ ಆರಿಸಿ ಕಳಿಸುತ್ತಾರೆಂದು ಹೇಳುವುದಕ್ಕಾಗುವದಿಲ್ಲ. ಆದುದರಿಂದ ಈ ವಿಷಯವನ್ನು ಮಾನ್ಯ ಸದಸ್ಯರು ಪ್ರಸ್ತಾಪ ಮಾಡದೇ ಹೋಗಿದ್ದರೆ ಚೆನ್ನಾಗಿತ್ತು. ರಾಜ್ಯದಾಡಳಿತದ ಅನುಭವ ಬಂದಮೇಲೆ ಎಲ್ಲಾ ಸರಿಹೋಗುತ್ತದೆ.

ಶ್ರೀ ಬಿ. ಕೆ. ಪುಟ್ಟರಾಮಯ್ಯ.—ಇಂಗ್ಲೆಂಡಿನಲ್ಲಿ ಮಂತ್ರಿಗಳನ್ನು ತರಪೇತು ಮಾಡುವ ಅನುಕೂಲವು ಇದೆ ಎಂಬುದು ನಮ್ಮ ಮಂತ್ರಿಯವರ ಗಮನಕ್ಕೆ ಬಂದಿದೆಯೇ ?

ಶ್ರೀ ಟಿ. ಮರಿಯಪ್ಪ.—ಇಂಗ್ಲೆಂಡಿನ ವಿಷಯ ಈಗ ನಮಗೆ ಏಕೆ ? ನಮ್ಮ ಮೈಸೂರಿನ ವಿಷಯ ಮಾತನಾಡೋಣ. ಮೈಸೂರು ದೇಶದ ಸಂಬಂಧ ನಮಗೂ ಇದೆ ನಿಮಗೂ ಇದೆ.

ಮಾನ್ಯ ಸದಸ್ಯರಾದ ಶ್ರೀ ಮಾದಪ್ಪನವರು ಈ ಬಜೆಟ್ಟು accurate ಇಲ್ಲ, ಬಹಳ inaccurate ಆಗಿದೆ ಎಂದು ಹೇಳಿದರು. ಆದರೆ ಎಷ್ಟರ ಮಟ್ಟಿಗೆ ಸಾಧ್ಯವೋ ಅಷ್ಟರ ಮಟ್ಟಿಗೆ ಈ ಬಡ್ಜೆಟ್ಟಿನ ಅಂಕಿ ಅಂಶಗಳು accurate ಆಗಿವೆಯೆಂದು ನಾನು ಧೈರ್ಯವಾಗಿ ಹೇಳಬಲ್ಲೆ. As accurate a picture as possible ಈ ಬಜೆಟ್ಟು ಆಗಿದೆ. ಯಾವ ಮುಚ್ಚುಮರೆಯೂ ಇಲ್ಲದೆ ಈ ಆಯವ್ಯಯ ಅಂದಾಜು ಪತ್ರಿಕೆಯನ್ನು ಸಭೆಯ ಮುಂದೆ ನಾನು ಇಟ್ಟಿದ್ದೇನೆ. ಏನಾದರೊಂದು ಟೀಕೆ ಮಾಡುತ್ತೇನೆ ಎಂದರೆ ಅದರಿಂದ ಏನೂ ಪ್ರಯೋಜನವಿಲ್ಲ. ಇನ್ನೊಬ್ಬ ಸದಸ್ಯರು ಟೀಕಿಸಿ ಕಾಂಗ್ರೆಸ್ ಪಕ್ಷದವರು ನಡೆಸುತ್ತಿದ್ದ ರಾಜ್ಯಭಾರವನ್ನು ನೋಡಿ ಸ್ವರ್ಗದಲ್ಲಿರುವ ಮಹಾತ್ಮಾಜಿಯವರು ವ್ಯಥೆಗೊಳ್ಳುವರೆಂದು ಹೇಳಿದರು. ಆ ಸದಸ್ಯರು ಈಗ ಕಾಂಗ್ರೆಸ್ ಪಕ್ಷವನ್ನು ಬಿಟ್ಟು ಹೋಗಿದ್ದಾರೆ ಎಂತಲೇ ಹೀಗೆ ಟೀಕೆ ಮಾಡಿದರು. ಹೀಗೆ ಹೇಳದೆ ಇದ್ದರೆ ಚೆನ್ನಾಗಿತ್ತು, ಹೀಗೆ ವ್ಯಕ್ತಿಗಳನ್ನು ಉದ್ದೇಶಿಸಿ ಟೀಕೆ ಮಾಡುವುದು ಸರಿಯಲ್ಲ. ನಮ್ಮ ನೀತಿಯನ್ನು ಕುರಿತು ಟೀಕೆ ಮಾಡಿದರೆ ಚೆನ್ನಾಗಿರುತ್ತದೆ. We are prepared to receive the hard knocks. ರಾಜ್ಯ ನಿರ್ಮಾಣದ ಜವಾಬ್ದಾರಿ ಆಡಳಿತ ಪಕ್ಷದಷ್ಟೇ ವಿರೋಧ ಪಕ್ಷದ ಮೇಲೂ ಇದೆ. ವಿರೋಧ ಪಕ್ಷದವರು ಸುಮ್ಮನೆ ಲಘುವಾಗಿ ಮಾತನಾಡುವುದನ್ನು ಬಿಟ್ಟರೆ ನಮಗೂ ಭೂಷಣ ನಿಮಗೂ ಭೂಷಣ.

ಸ್ವಾಮಿ, ಪೀಠಿಕಾರೂಪವಾಗಿ ಇಷ್ಟು ವಿವರವಾಗಿ ಈ ಸಭೆಗೆ ನಾನು ಅರಿಕೆ ಮಾಡಿಕೊಳ್ಳಬೇಕಾಯಿತು. ಮಾನ್ಯಸದಸ್ಯರಾದ ಶ್ರೀ ಶಂಷುದ್ದೀನರು ಮಾತನಾಡುವಾಗ ಒಂದು ವಿಷಯವನ್ನು ಹೇಳದೇ ಇದ್ದರೆ ಚೆನ್ನಾಗಿತ್ತು. ಅವರು ಈ ಆಯವ್ಯಯ ಅಂದಾಜಿನ ಪಟ್ಟಿಯನ್ನು ಚೆನ್ನಾಗಿ ವಿಮರ್ಶೆಮಾಡಿ ನೋಡಿದ್ದಾರೆ. ಅವರು ಒಳ್ಳೆ ರಚನಾತ್ಮಕವಾದ ಸಲಹೆಮಾಡಿದ್ದಾರೆ. ಒಂದು ಅಂಶದ ಬಗ್ಗೆ ಮಾತ್ರ ತಪ್ಪು ಅಭಿಪ್ರಾಯ ವ್ಯಕ್ತಪಡಿಸಿದರು. ಅದೇನೆಂದರೆ ಹಳೆಯ ಮೈಸೂರಿಗೆ ಹೆಚ್ಚುಹಣ ಒದಗಿಸಲಾಗಿದೆಯೆಂದು ಅವರು ಆಕ್ಷೇಪಣೆ ಮಾಡಿದರು. ಆದರೆ ನಾನು ಆತ್ಮಸಾಕ್ಷಿಯಾಗಿ ಹೇಳುತ್ತೇನೆ, ಇದರಲ್ಲಿ ಯಾವ ಪಕ್ಷಪಾತ ದೃಷ್ಟಿಯೂ ಇಲ್ಲ. ರಾಜ್ಯ ಪುನರ್ವಿಂಗಡಣೆಯ ಮುಂಚೆ ಆಯಾ ಪ್ರದೇಶದಲ್ಲಿ ಮುಂಜೂರಾಗಿದ್ದ ಕೆಲಸಗಳಿಗೆ ಹಣ ಒದಗಿಸಲಾಗಿದೆ. ಯಾವ ಯಾವ ಯೋಜನೆಗಳು ಮೊದಲೇ ಅಂಗೀಕೃತವಾಗಿವೆಯೋ ಅವುಗಳಿಗೆಲ್ಲಾ ಹಣಒದಗಿಸುವದಕ್ಕೆ ಆರ್ಡರ್ ಆಗಿದ್ದು ಹಣ ಒದಗಿಸಲಾಗುತ್ತದೆ. ಹಳೆಯ ಮೈಸೂರು ಪ್ರಗತಿಪರವಾಗಿದೆ. ಮೊದಲನೆಯ ಪಂಚವಾರ್ಷಿಕ ಯೋಜನೆಯು ಈಗ ತಾನೆ ಪೂರ್ತಿಯಾಗಿ ಎರಡನೆ ಯೋಜನೆಯು ಪ್ರಾರಂಭವಾಗಿದೆ. ಮೊದಲನೆ ಪಂಚವಾರ್ಷಿಕ ಯೋಜನೆಯ ಅವಧಿಯಲ್ಲಿ ಯಾವ ಕೆಲಸಕ್ಕೆ ಎಷ್ಟುಹಣ ಒದಗಿಸಬೇಕಾಗಿತ್ತೋ ಅಷ್ಟನ್ನು ಒದಗಿಸಲಾಗಿದೆ. ಹಳೆಯ ಮೈಸೂರು ಚಿಕ್ಕ ಪ್ರದೇಶ ಅಲ್ಲ. ಅದೂ ಸಹ ದೊಡ್ಡಪ್ರದೇಶ. 33000 ಚದರ ಮೈಲಿ ವಿಸ್ತಾರವಾಗಿದ್ದು ಒಂದು ಕೋಟಿ ಪ್ರಜಾಸಂಖ್ಯೆಯುಳ್ಳ ದೇಶ. ದೇಶಾಭಿವೃದ್ಧಿ ಯೋಜನೆಗಳಿಗೆಲ್ಲಾ ಖರ್ಚುಮಾಡಲಾಗಿದೆ. ಈಗ ಹೊಸ ಮೈಸೂರು ರಾಜ್ಯ ಆದಮೇಲೂ ಸಹ ಯಾವುದೇ ತರದ ಪಕ್ಷಪಾತ ಇಲ್ಲ. ಈಸಭೆಗೆ ಎಲ್ಲರೂ ಒಂದೇ. ಹೊಸ ಮೈಸೂರು ಹಿಂದುಳಿದ ಪ್ರದೇಶವೆಂದು ಹೆಚ್ಚಿನ ಗಮನ ಕೊಡಬೇಕೆಂದು Finance Commission ಮುಂದೆ ಪ್ರತಿಪಾದನೆ ಮಾಡಿದ್ದೇವೆ. ಹಾಗೆಯೇ ಇಂಡಿಯಾ ಸರಕಾರದ ಮುಂದೆಯೂ ಪ್ರತಿಪಾದನೆ ಮಾಡಿದ್ದೇವೆ. ಹಿಂದುಳಿದ ಪ್ರದೇಶಗಳಿಗೆ ಹೆಚ್ಚುಸಹಾಯ ಮಾಡಬೇಕೆಂಬುದೇ ನಮ್ಮೆಲ್ಲರ ಅಭಿಪ್ರಾಯ. ಶಿಕ್ಷಣ ವಿಷಯದಲ್ಲಿ ಹಿಂದುಳಿದಿದೆಯೆಂದು ಮಾನ್ಯ ವಿದ್ಯಾಸಚಿವರುಗಳಾದ ಶ್ರೀ ವೆಂಕಟಪ್ಪನವರು ತ್ವರಿತವಾಗಿ ಹೈದರಾಬಾದು ಕರ್ನಾಟಕ ಭಾಗಕ್ಕೆ 200 ಪ್ರಾಥಮಿಕ ಶಾಲೆಗಳನ್ನು ಒದಗಿಸಿದ್ದಾರೆ.

ಫೈನಾನ್ಸ್ ಕಮಿಷನ್ನಿಗೆ ನಾವು ಎಲ್ಲವನ್ನೂ ತಿಳಿಸಿದ್ದೇವೆ. ಹಳೆಯ ಮೈಸೂರು ಪ್ರದೇಶದಲ್ಲಿ ನೂರುಚದರ ಮೈಲಿಗೆ 36 ಮೈಲಿ ರಸ್ತೆಯಿದೆ, ಆದರೆ ಹೈದರಾಬಾದಿಗೆ ಸೇರಿದ್ದ ಪ್ರದೇಶದಲ್ಲಿ ನೂರು ಚದರ ಮೈಲ್ಲಿಗೆ ಆರು ಮೈಲಿ ರಸ್ತೆಯಿದೆ. ಇದನ್ನೆಲ್ಲಾ ಅವರಿಗೆ ಹೇಳಿದ್ದೇವೆ. ನಾನು ಒಂದು ವಿಷಯ

ವನ್ನು ಹೇಳಿದರೆ ಸದಸ್ಯರೆಲ್ಲರೂ ಅದನ್ನನುಮೋದಿಸುತ್ತಾರೆಂದು ನಂಬಿದ್ದೇನೆ. ಹಿಂದುಳಿದ ಪ್ರದೇಶಗಳು ನಮ್ಮ ಪಾಲಿಗೆ ಬಂದಿವೆ; ಅವುಗಳನ್ನು ಮೇಲ್ಮಟ್ಟಕ್ಕೆತ್ತಬೇಕಾದುದು, ಅವುಗಳನ್ನು ಅಭಿವೃದ್ಧಿಮಾಡಬೇಕಾದುದು ಅತ್ಯಾವಶ್ಯಕ. ಕೆಲವು ಪ್ರದೇಶಗಳು ಬಹಳ ಹಿಂದುಳಿದಿವೆ ; ಸರಿಯಾದ ರಸ್ತೆಗಳಿಲ್ಲ, ಕಾಡುದಾರಿಗಳಿವೆ, ಅನೇಕ ಕಡೆ ದೋಣಿಗಳಲ್ಲಿ ನದಿಗಳನ್ನು ದಾಟಬೇಕಾಗಿದೆ, ಸೇತುವೆಗಳಿಲ್ಲ. ಈ ಪರಿಸ್ಥಿತಿಗೆ ಚಾರಿತ್ರಿಕ ವಿಷಯಗಳು ಕಾರಣ. ಆ ಪ್ರದೇಶಗಳ ಪರಿಸ್ಥಿತಿಯನ್ನು ನೋಡಿದರೆ ನನಗೆ ವ್ಯಥೆಯಾಗುತ್ತದೆ. ಪಕ್ಷಪಾತ ಮಾಡಬೇಕೆಂದು ಈ ಸಭೆಗಾಗಲಿ ಇಷ್ಟವಿಲ್ಲ.

ಶ್ರೀ ಸಿ. ಕೆ. ರಾಜಯ್ಯಶೆಟ್ಟಿ.—ಏಕ್‌ದಂ ಹಳೆಯ ಮೈಸೂರಿಗೆ ಖೋತಾಮಾಡಬೇಡಿ.

Sri M. C. NARASIMHAN.—The Hon'ble Minister was just now pleased to say that so far as primary schools were concerned, in Hyderabad alone 200 schools were given ; here, it is said that 165 schools for the whole integrated area.

Sri V. VENKATAPPA (Minister for Education).—For Hyderabad area 161 schools have been given and for Coorg four have been given.

Sri T. MARIAPPA.—Subject to correction I gave the number ; it is 161.

ಅಧ್ಯಕ್ಷರು.—ಬೊಂಬಾಯಿ ಕನ್ನಡ ಪ್ರದೇಶ ಮತ್ತು ಮಂಗಳೂರಿನಲ್ಲಿ ಬೇಕಾದಷ್ಟು ಸ್ಕೂಲುಗಳಿವೆ.

ಶ್ರೀ ಟಿ. ಮರಿಯಪ್ಪ.—ವಿರೋಧ ಪಕ್ಷದ ಸದಸ್ಯರನ್ನು ಆ ಕೆಲವು ಹಿಂದುಳಿದ ಪ್ರದೇಶಗಳಿಗೆ ಕರೆದುಕೊಂಡು ಹೋಗಬೇಕು. ಅವರೇ ಪ್ರತ್ಯಕ್ಷವಾಗಿ ಅಲ್ಲಿನ ಪರಿಸ್ಥಿತಿಯನ್ನು ನೋಡಿದ ಮೇಲೆ ಅವರೇ ' ಹೈದರಾಬಾದು ಕನ್ನಡ ಪ್ರದೇಶ ಮುಂದೆ ಬರಲಿ, ಬೊಂಬಾಯಿ ಕರ್ಣಾಟಕ ಮುಂದೆ ಬರಲಿ ' ಎಂದು ಹೇಳುತ್ತಾರೆ. ಹೈದರಾಬಾದಿನಿಂದ ಬಂದಿರುವ ಪ್ರದೇಶದಲ್ಲಿ ಕಪ್ಪು ಭೂಮಿ, ಅಲ್ಲಿ ರಸ್ತೆಗಳಿಲ್ಲ, ರಸ್ತೆಗಳನ್ನು ಹಾಕ ಬೇಕೆಂದರೆ ಕಷ್ಟ, ಹೊಳೆ ಹಳ್ಳಗಳಿಗೆ ಸೇತುವೆಗಳಿಲ್ಲ. ಮಳೆಗಾಲದಲ್ಲಿ ಒಂದೊಂದು ವೇಳೆ ಎರಡು ಮೂರು ದಿನಗಳು ಸಂಚಾರ ಬಂದಾಗುತ್ತದೆ. ಆದುದರಿಂದ ಸದಸ್ಯರೆಲ್ಲರೂ ಆ ಪ್ರದೇಶಗಳೂ ಕೂಡ ಹಳೆಯ ಮೈಸೂರಿನ ಪ್ರದೇಶದಂತಾಗಲೆಂದು ಮನಸ್ಸು ಮಾಡಿದರೆ ಆಗುತ್ತದೆ.

ಮಾನ್ಯ ಸದಸ್ಯರಾದ ಶ್ರೀಮಾನ್ ಕೆಂಚಪ್ಪನವರು ಈಗ ಸಭೆಯಲ್ಲಿದ್ದಿದ್ದರೆ ಚೆನ್ನಾಗಿತ್ತು. ಅವರು ಮಾಡುವ ಟೀಕೆಗಳನ್ನೂ ಸಲಹೆಗಳನ್ನೂ ಮುಖ್ಯವಾಗಿ ಗಮನಿಸಬೇಕು. ಏಕೆಂದರೆ, ಅವರು ಒಂದು ಮುಖ್ಯ ಪಕ್ಷದ ನಾಯಕರು. ರಾಜ್ಯದ ಆಡಳಿತದ 22 ಕೋಟಿ ರೂಪಾಯಿನ ಖರ್ಚಿನಲ್ಲಿ 14 ಕೋಟಿ ರೂಪಾಯಿ ಸಿಬ್ಬಂದಿಗೇ ಖರ್ಚಾಗುತ್ತದೆಂದು ಅವರು ಹೇಳಿದ್ದಾರೆ. ಅದು ಸರಿಯಲ್ಲ. ಇನ್ನೂ ನಮಗೆ Audited accounts ದೊರೆತಿಲ್ಲ. ಸ್ಥೂಲವಾಗಿ ಸ್ವಲ್ಪ ಹೆಚ್ಚು ಕಡಮೆ ಹೇಳುವುದಾದರೆ ಸುಮಾರು 35 ಕೋಟಿ ರೂಪಾಯಿ ಖರ್ಚಿನಲ್ಲಿ ಸುಮಾರು 15 ಕೋಟಿ ರೂಪಾಯಿನಷ್ಟು Staff Salaries and Dearness Allowances ಆಗಬಹುದು. ಅಂಕಿ ಅಂಶಗಳನ್ನು ಕೊಡುತ್ತೇವೆ, ಏಕೆಂದರೆ, ಸರಿಯಾದ ಟೀಕೆಗಳು ಬರಲೆಂದು, ಆಧಾರಭೂತವಾಗಿರಲೆಂದು, ಆಧಾರ ರಹಿತವಾಗದೇಯಿರಲೆಂದು.

ಇನ್ನು ಶ್ರೀಮಾನ್ ಷಂಷುದ್ದೀನ್‌ರವರು, ಎಲ್ಲ ತೆರಿಗೆಗಳಿಂದ ಬರುವ ವರಮಾನ ಮೂರು ಕೋಟಿ ಎಂದು ಹೇಳಿದ್ದಾರೆ, ಇನ್ನೂ ಎರಡು ಕೋಟಿ ಹೆಚ್ಚು ಬರುತ್ತದೆಂದು ಹೇಳುತ್ತಿದ್ದಾರೆ. ಈಗಾಗಲೇ ಈ ತೆರಿಗೆಯನ್ನು ಕಡಮೆ ಮಾಡಬೇಕು, ಆ ತೆರಿಗೆಯನ್ನು ಕಡಮೆ ಮಾಡಬೇಕು ಎಂದು ಸದಸ್ಯರು ಹೇಳುತ್ತಿದ್ದಾರೆ. ಹೀಗಿರುವಾಗ ಇದರಲ್ಲಿ ಇನ್ನೆಷ್ಟು ಕಡಮೆ ಬರುತ್ತದೆಯೋ ಗೊತ್ತಿಲ್ಲ. ಹೆಚ್ಚು ವರಮಾನ ಬಂದರೆ ಸಂತೋಷಪಡುತ್ತೇನೆ. ಆದರೆ ಕೆಲವನ್ನು ಸಂದರ್ಭಗಳ ದೆಶೆಯಿಂದ ಕಡಮೆ ಮಾಡಬೇಕಾಗಬಹುದೆಂಬ ದೃಷ್ಟಿಯಿಂದ ಮೂರು ಕೋಟಿ ರೂಪಾಯಿ ಎಲ್ಲ ತೆರಿಗೆಗಳಿಂದ ಬರಬಹುದೆಂದು ನಿರೀಕ್ಷೆಮಾಡಿದ್ದೇವೆ. ಹೆಚ್ಚುಬಂದರೆ ಸಂತೋಷ.

ಇನ್ನು ಕೆಲವು ಸದಸ್ಯರು ಆಡಳಿತದ ಖರ್ಚಿನಲ್ಲಿ ಉಳಿತಾಯ ಮಾಡವುದು ಬಹಳ ಅಗತ್ಯ, ಅವಶ್ಯಕವೆಂದು ಹೇಳಿದರು. ಈ ವಿಷಯವನ್ನು ನಾನು ನನ್ನ ಭಾಷಣದಲ್ಲಿ ಸೂಚಿಸಿದ್ದೇನೆ. ನಾವು ಐದಾರು ದಿವಸ ಕುಳಿತುಕೊಂಡು ಯೋಚನೆಮಾಡಿ ಸುಮಾರು ಎರಡು ಕೋಟಿ ರೂಪಾಯಿಗಳಷ್ಟು ಉಳಿಸಿದ್ದೇವೆ. ಆದರೂ ಹೊಸ ಹೊಸ ಅಭಿವೃದ್ಧಿ ಕಾರ್ಯಗಳನ್ನು ಮಾಡುವವರೆಗೂ ಖರ್ಚು ಜಾಸ್ತಿಯಾಗುವುದು ಅನಿವಾರ್ಯ. ಯಾವಾಗಲೂ ಉಳಿತಾಯದ ಏರ್ಪಾಡು ಮಾಡಬೇಕೆಂಬುದನ್ನು ಪರಿಶೀಲನೆ ಮಾಡುತ್ತಲೇ ಇದ್ದೇವೆ. ಸ್ಟೇಟ್ ಮಟ್ಟದಿಂದ ತಾಲ್ಲೂಕು ಮಟ್ಟದವರೆಗೆ ಯಾವ ಮಾರ್ಗಗಳಿಂದ ಉಳಿತಾಯ ಮಾಡಬಹುದೆಂಬ ಬಗ್ಗೆ ಪರಿಶೀಲನೆ ಮಾಡಲು ಒಬ್ಬ ತಜ್ಞ ಅಧಿಕಾರಿಗಳನ್ನು ನೇಮಕ ಮಾಡಬೇಕೆಂದು ನಾನು ಹೇಳಿದ್ದೇನೆ. ಇದನ್ನು ಯಾರೂ ಲಘುವಾಗಿ ಯೋಚನೆ ಮಾಡಬಾರದು. ನಾವೂ ಕೂಡ ಇಂಥ ಕೆಲಸವನ್ನು ಮಾಡಬಹುದು. ಆದರೆ ನಾವು ಎಷ್ಟೇ ಆಗಲಿ laymen, ಅಲ್ಲದೆ ಇತರ ಬೇರೆಬೇರೆ ಕೆಲಸ ಮಧ್ಯೆ ಮಾಡಬೇಕು ಈ ಕಾರಣ ನಾವು ಅಷ್ಟು ಸಮರ್ಪಕವಾಗಿ ಈ ಕೆಲಸವನ್ನು ನಿರ್ವಹಿಸಲು ಸಾಧ್ಯವಾಗದೇ ಇರಬಹುದು. ಆದುದರಿಂದ ಅನುಭವಶಾಲಿಗಳೂ ತಜ್ಞರೂ ಆದ ಒಬ್ಬ ಅಧಿಕಾರಿ ಈ ಕೆಲಸಕ್ಕಾಗಿಯೇ ಇದ್ದರೆ ಒಳ್ಳೆಯದೆಂದು ನಾನು ಯೋಚನೆ ಮಾಡಿದೆ. ನಾನು ಇಲ್ಲಿ ಭಾಷಣ ಮಾಡಿದ ಮೇಲೆ, ಈ ವಿಷಯವನ್ನು ಸೂಚಿಸಿದ ಮೇಲೆ, ಮದರಾಸಿನ ಮಂತ್ರಿಗಳೂ ಇದೇ ರೀತಿ ಅಲ್ಲಿ ಹೇಳಿದ್ದಾರೆ. ಖರ್ಚು ಕಡಮೆ ಮಾಡಲು, ಮಿತವ್ಯಯದ ಮಾರ್ಗಗಳನ್ನು ಸಲಹೆಮಾಡಲು ಒಬ್ಬರು ಅನುಭವಿಗಳೂ ತಜ್ಞರೂ ಆದ ಅಧಿಕಾರಿಯನ್ನು ನೇಮಿಸಬೇಕೆಂದು ಹೇಳಿದ್ದಾರೆ. ಬೊಂಬಾಯಿಯಲ್ಲಿ ಈ ಕೆಲಸಕ್ಕೆ ಒಬ್ಬ ಐ. ಸಿ. ಎಸ್. ಅಧಿಕಾರಿಯನ್ನು ನೇಮಿಸಲು ಕ್ರಮ ತೆಗೆದುಕೊಂಡಿದ್ದಾರೆ. ಕೇಂದ್ರ ಸರ್ಕಾರದಲ್ಲಿ ಪ್ರತಿಯೊಂದು ಇಲಾಖೆಗೂ ಒಂದೊಂದು ಚಿಕ್ಕ ' ಎಕಾನಮಿ ಬೋರ್ಡ್ ' ನೇಮಕ ಮಾಡಿದ್ದಾರೆ. ಇದರಿಂದ ಇದರ ಮಹತ್ವವೆಷ್ಟೆಂಬುದು ಗೊತ್ತಾಗುತ್ತದೆ.

Sri V. P. DEENADAYALU NAIDU (Cubbonpet).—Had not the Government of Mysore appointed a Special Officer to devise means and measures to economise the expenditures and was that report not before that Government ?

Sri T. MARIAPPA.—The Hon'ble Member forgets that he is in the new set up. That is an old story, Sir, and one year has passed and a year makes a world of difference.

Sri V. P. DEENADAYALU NAIDU.—What action was taken with regard to that old report ?

Sri T. MARIAPPA.—It is purely of academic interest. Action was taken on that report and some economy was effected by the old Government.

ಇಂಥ ಸಂದರ್ಭ ಏಕೆ ಉದ್ಭವಿಸಿತು ಎಂಬುದನ್ನು ಎಲ್ಲರೂ ಗಮನಿಸಬೇಕು. ಎರಡನೆಯ ಪಂಚವಾರ್ಷಿಕ ಯೋಜನೆಯನ್ನು ತೀವ್ರವಾಗಿ ಮುಗಿಸಬೇಕು. ಇದು ದೇಶವನ್ನು ಕಟ್ಟಬೇಕೆಂಬ ದೊಡ್ಡ ಯೋಜನೆ ಎಂಬುದು ಎಲ್ಲರಿಗೂ ಗೊತ್ತಿದೆ. ಒಂದು ವಿಷಯವನ್ನು ಯೋಚಿಸಿದರೆ ವಿಷಾದವಾಗುತ್ತದೆ. ಬೇರೆ ಬೇರೆ ರಾಜಕೀಯ ಪಕ್ಷಗಳು ಕೇಂದ್ರದಲ್ಲಿಯೂ ಇವೆ, ಇಲ್ಲಿಯೂ ಇವೆ. ಅಲ್ಲಿ ಎಲ್ಲ ರಾಜಕೀಯ ಪಕ್ಷಗಳೂ planned target ಕಡಮೆ ಮಾಡಬಾರದೆಂದು ಒಂದೇ ಧ್ವನಿಯಿಂದ ಹೇಳಿವೆ. ಇಲ್ಲಿ ಹಾಗಿಲ್ಲವಲ್ಲ ಎನಿಸುತ್ತದೆ. ಅಲ್ಲಿ ನಮ್ಮೆಲ್ಲ ಶಕ್ತಿಸಾಮರ್ಥ್ಯಗಳನ್ನೂ ಉಪಯೋಗಿಸಿ ಪೂರ್ಣವಾಗಿ ನಮ್ಮ ಯೋಜನೆಗಳ ಗುರಿಯನ್ನು ಮುಟ್ಟಬೇಕೆಂದು ಹೇಳಿದ್ದಾರೆ. ಕಮ್ಯುನಿಸ್ಟ್ ಸದಸ್ಯರು ಕೂಡ ಹೀಗೆ ಹೇಳಿದ್ದಾರೆ. ಸೂಯೆಜ್ ಘಟನೆಯಾದ ಮೇಲೆ ಪ್ರಪಂಚದಲ್ಲಿ ಏನು ಪರಿಸ್ಥಿತಿ ಬಂತೆಂಬುದನ್ನು ಗಮನಿಸಬೇಕು. ಮುಂಚಿತವಾಗಿ ಯಂತ್ರೋಪಕರಣಗಳಿಗೆ ಕೊಟ್ಟಿದ್ದ ಆರ್ಡರುಗಳಿಗೆ, ಆ ಎಲ್ಲ ಸಾಮಾನುಗಳ ಬೆಲೆಗಳೂ ಜಾಸ್ತಿಯಾಗಿ ಹೋದುವು. ಒಂದು ಸಕ್ಕರೆ ಕಾರ್ಖಾನೆಯನ್ನು 70-80 ಲಕ್ಷ ರೂಪಾಯಿಗಳಲ್ಲಿ ಮಾಡಬಹುದಾಗಿದ್ದುದು ಈಗ ಒಂದು ಕೋಟಿ 20 ಲಕ್ಷವಾಗುತ್ತದೆ. ಇದಕ್ಕೆ ಅನೇಕ ಕಾರಣಗಳಿವೆ. ಮುಖ್ಯವಾಗಿ ನಮಗೆ Sterling balance ಕಡಮೆಯಾಯಿತು. ಕೇಂದ್ರ ಸರ್ಕಾರವಾಗಲಿ ನಮ್ಮ ರಾಜ್ಯ ಸರ್ಕಾರವಾಗಲಿ ನಾವು ಆತ್ಮಗೌರವದಿಂದ ಬಾಳಬೇಕಾದರೆ, ಅನಾವಶ್ಯಕವಾದ ಖರ್ಚು ಕಡಮೆಮಾಡಿ, ಅಭಿವೃದ್ಧಿ ಕಾರ್ಯಗಳಿಗೆ ಹಣವನ್ನುಪಯೋಗಿಸಲೇಬೇಕು. ಅನಾವಶ್ಯಕವಾಗಿ ಟೀಕೆ ಮಾಡಿದರೆ ಅರಿವಿಲ್ಲದೆ ಮಾಡಿದಹಾಗಾಗುತ್ತವೆ. Economy is inevitable ಹೊರಗಿನಿಂದ ಬರುವ ಸಹಾಯ ಬರಬಹುದು ಅಥವಾ ನಿಲ್ಲಬಹುದು ; ಗೊತ್ತಿಲ್ಲದೆ ಇರುವ ಮೂಲದಿಂದ ಹಣ ಬರಬಹುದು, ಗೊತ್ತಿರುವ ಮೂಲದಿಂದ ಬರಬಹುದು. ಆದರೆ ಕೇಂದ್ರ ಸರ್ಕಾರದವರು ಹಗಲೂರಾತ್ರಿ ಪ್ರಯತ್ನಪಟ್ಟು ಹೊರಗಡೆಯಿಂದ ಹಣವನ್ನು ಪಡೆಯುತ್ತಿದ್ದಾರೆ. ಎರಡನೆಯ ಪಂಚವಾರ್ಷಿಕ ಯೋಜನೆಯನ್ನು phased programme ಮಾಡುವುದಕ್ಕೆ ಸಾಧ್ಯವೇ ಎಂಬುದನ್ನೂ ಯೋಚನೆ ಮಾಡುತ್ತಿದ್ದಾರೆ. ದೇಶಾಭಿವೃದ್ಧಿ ಕಾರ್ಯಗಳಲ್ಲಿ ಮಿತವ್ಯಯ ಮಾಡುತ್ತೇವೆಂದು ಕೈಹಿಡಿತ ಮಾಡುವುದು ಕಷ್ಟ. ದೊಡ್ಡ ಯೋಜನೆ ಮಾಡುವಾಗ ಕೆಲವು ಸಂದರ್ಭಗಳಲ್ಲಿ ಇಲಾಖೆಗಳಿಂದ ಅನಾವಶ್ಯಕವಾದ ಯೋಜನೆಗಳೂ ಬರಬಹುದು. ಎಲ್ಲರೂ ಆವಶ್ಯಕವಾದ ಯೋಜನೆಗಳನ್ನೇ ಕಳುಹಿಸುತ್ತಾರೆಂದು ನಂಬುವಹಾಗಿಲ್ಲ. ಹಳೆಯ ಆಡಳಿತ ಪದ್ಧತಿಯಲ್ಲೇ ಬಹುಕಾಲ ಕೆಲಸ ಮಾಡಿರುವವರಲ್ಲಿ ಎಲ್ಲರೂ ದೂರದೃಷ್ಟಿಯನ್ನಿಟ್ಟುಕೊಂಡಿದ್ದಾರೆಂದು ಹೇಳುವುದಕ್ಕಾಗುವುದಿಲ್ಲ. ಅದಕ್ಕೆ "It will be constantly under review" ಎಂದು ಹೇಳಿದ್ದೇನೆ. ಆದುದರಿಂದ ಅನುಭವವಿರತಕ್ಕ ಒಬ್ಬ ದೊಡ್ಡ ಅಧಿಕಾರಿಯನ್ನು ಗೊತ್ತುಮಾಡಿ, ಎಲ್ಲೆಲ್ಲಿ ಎಷ್ಟು ಮಟ್ಟಿಗೆ ಹಣವನ್ನುಳಿಸಬಹುದೆಂಬುದನ್ನು ನೋಡುವುದು ಆವಶ್ಯಕ. ಈಗಾಗಲೇ ಕೆಲವು ಬಾಬುಗಳಲ್ಲಿ ಉಳಿಸುತ್ತಿದ್ದೇವೆ. ಆದರೆ ಇನ್ನೂ ಹೆಚ್ಚು ಕಡೆ ಉಳಿಸಲು ಅವಕಾಶವಿಲ್ಲವೆಂದು ಹೇಳುವುದಕ್ಕಾಗುವುದಿಲ್ಲ. ನನಗೂ ಈ ವಿಷಯದಲ್ಲಿ ಅನುಭವವಿದೆ. ಆದರೆ ಬಹಳ ಎಚ್ಚರಿಕೆಯಿಂದ ಮಾಡಬೇಕು. ಈಗಾಗಲೇ ಬೇರೆ ಕಡೆ ಖರ್ಚು ಖೋತಾ ಮಾಡಲು ಪ್ರಯತ್ನಿಸಿ ನಿರುದ್ಯೋಗ ಸಮಸ್ಯೆ ಉದ್ಭವಿಸುತ್ತಿದೆ. ಆದರೆ ಇಲ್ಲಿ ನಿರುದ್ಯೋಗ ಹೆಚ್ಚಿಸಲು ಖೋತಾ ಮಾಡಬೇಕೆಂಬುದು ನನ್ನ ಉದ್ದೇಶವಲ್ಲ. ಇಂಡಿಯಾ ದೇಶದ ಹೊರಗಡೆ ಉದ್ಭವಿಸಿರುವ ಪರಿಸ್ಥಿತಿ ಇಲ್ಲಿ ಬಾರದೆಇರುವಹಾಗೆ ಆದಷ್ಟು ಪ್ರಯತ್ನ ನಡೆಯುತ್ತಿದೆ. ಆದಷ್ಟುಮಟ್ಟಿಗೆ ದೇಶಾಭಿವೃದ್ಧಿ ಕೆಲಸಕಾರ್ಯಗಳನ್ನು ಮಾಡಬೇಕೆಂಬ ಉದ್ದೇಶದಿಂದ ಅಂಥ ಕಾರ್ಯಕ್ರಮಗಳನ್ನು ಕೈಗೊಳ್ಳುತ್ತಿದ್ದೇವೆ, ಕೈಗೊಳ್ಳುತ್ತೇವೆ. ಇಂಥ ಅನೇಕ ಸಲಹೆಗಳನ್ನು ಸದಸ್ಯರು ಮಾಡಿದ್ದಾರೆ, ಇನ್ನೂ ಮಾಡಬಹುದು.

11 A.M.

ಶ್ರೀಮಾನ್ ಪುಟ್ಟಣ್ಣನವರು ಒಂದು ಪ್ರಶ್ನೆಯನ್ನು ಕಳಿಸಿದ್ದರು. ಎಲ್. ಐ. ಎಸ್. ಬ್ಲಾಕಿನಲ್ಲಿ ಎಷ್ಟು ಸಿಬ್ಬಂದಿ ಇದ್ದಾರೆ ಎಂದು ಕೇಳಿದರು. ಸದಸ್ಯರು ಈ ರೀತಿ ಡೂಪ್ಲಿಕೇಷನ್ ಆಫ್ ಸ್ಟ್ಯಾಫ್ ಇದೆಯೋ ಎಂದು ಪ್ರಶ್ನೆಗಳನ್ನು ಕಳುಹಿಸಿದರೆ, ನಾವು ಸ್ಟ್ಯಾಫ್ ಹೆಚ್ಚಾಗಿದ್ದರೆ ಕಡಮೆ ಮಾಡಲು ಅನುಕೂಲವಾಗುತ್ತದೆ. ಹೀಗೆ ರಚನಾತ್ಮಕ ಸಲಹೆಗಳು ಸದಸ್ಯರಿಂದ ಹೆಚ್ಚಾಗಿ ಬಂದರೆ ಖರ್ಚನ್ನು ಕಡಮೆ ಮಾಡುವುದಕ್ಕೆ ಅವಕಾಶವಿದೆ. ಶ್ರೀ ಪಾದಪ್ಪನವರು ಮೇಲ್ಮನೆಯು ಒಂದು ಲಕ್ಷುರಿ ಅದನ್ನು ವಜಾ ಮಾಡಿದರೆ ಹಣ ಉಳಿಯುತ್ತದೆ ಎಂದು ಹೇಳಿದ್ದಾರೆ. ಆದರೆ ನಾನು ಹೇಳುತ್ತೇನೆ, ರಾಜ್ಯಾಂಗದಲ್ಲಿ ಮೇಲ್ಮನೆ ಇರಬೇಕೆಂದು ಹೇಳಿರುವವರೆಗೆ ನಾವು ಅದಕ್ಕೆ ಬೇಕಾದ ಹಣವನ್ನು ಒದಗಿಸಲೇಬೇಕು. ಆದ್ದರಿಂದ ವಜಾಮಾಡುವ ಪ್ರಶ್ನೆ ಈಗ ಉದ್ಭವಿಸುವುದಿಲ್ಲ. ಯಾವಯಾವುದಕ್ಕೆ ಹಣ ಒದಗಿಸಬೇಕೆಂದು ರಾಜ್ಯಾಂಗದಲ್ಲಿ ಹೇಳಿರುತ್ತದೆಯೋ ಅದಕ್ಕೆಲ್ಲಾ ಒದಗಿಸಲೇಬೇಕು.

ಒಬ್ಬ ಸದಸ್ಯರು.—ಅದಕ್ಕೆ ಬದಲಾಗಿ ಮೇಲ್ಮನೆಯ ಸದಸ್ಯರನ್ನು ಹೆಚ್ಚುಮಾಡಬೇಕೆಂದು ಮಾಡಿದ್ದೀರಿ !

ಶ್ರೀ ಟಿ. ಮರಿಯಪ್ಪ.—ಮೇಲ್ಮನೆ ಕೆಳಮನೆಯ 1/3 ಭಾಗದಷ್ಟು ಇರಬೇಕೆಂದು ಇದೆ. ಅದಕ್ಕನುಗುಣವಾಗಿ ಸದಸ್ಯರ ಸಂಖ್ಯೆಯನ್ನು ಹೆಚ್ಚು ಮಾಡಬೇಕೆಂದು ನಮ್ಮ ಅಸೆಂಬ್ಲಿಯವರು ಒಂದು ನಿರ್ಣಯ ಮಾಡಿ ಕೇಂದ್ರಕ್ಕೆ ಕಳಿಸಿದ್ದಾರೆ. ಬಹುಶಃ ಪಾರ್ಲಿಮೆಂಟಿನಲ್ಲಿ ಅದಕ್ಕೆ ಸಂಬಂಧಪಟ್ಟ ಬಿಲ್ಲು ಇಷ್ಟರಲ್ಲೇ ಬರುತ್ತದೆ. ಗೌರ್ನರ್ ಅವರ ಭಾಷಣದ ಮೇಲೆ ಚರ್ಚೆ ಮಾಡುವಾಗಲೂ ಮತ್ತು ಈಗಲೂ ಈ ಸಭೆಯ ಸದಸ್ಯರನೇಕರು ಮಂತ್ರಿಗಳು ಓಡಾಟವನ್ನು ಕಡಮೆ ಮಾಡಿದರೆ ಬಹಳ ದುಡ್ಡು ಉಳಿತಾಯವಾಗುತ್ತದೆ ಎಂದು ಹೇಳಿದ್ದಾರೆ. ಇದರ ಮೇಲೆ ಬಹಳ ಪ್ರಶ್ನೆಗಳನ್ನು ಆಗಲೇ ಹಾಕಿದ್ದಾರೆ. ಅದಕ್ಕೆ ಉತ್ತರ ಕೊಡುತ್ತೇನೆ. ಪರಿಶೀಲನೆ ಮಾಡಿ ಹೋಲಿಸಿ ನೋಡಿ 1-11-56ರ ಈಚೆಗೆ ಮಂತ್ರಿಗಳು ಓಡಾಟದಿಂದ ಎಷ್ಟು ಹಣ ಸರ್ಕಾರಕ್ಕೆ ಖರ್ಚಾಗಿದೆ ಹೇಳಿ ? ಆದರೆ ಸುಮ್ಮನೆ

ವಿನಾಕಾರಣ ಮಂತ್ರಿಗಳು ಓಡಾಟಕ್ಕೆ ಖರ್ಚು ಮಾಡಿದ್ದಾರೆ, ಪಾಂಪ್ ಮತ್ತು ಷೋ ಇದೆ ಎಂದು ಹೇಳುವುದು ಸಾಧುವಲ್ಲ. ಅನೇಕ ಆಫೀಸರು ಬಾರ್ಡರ್‌ಗೆ ಬಂದು ಮಂತ್ರಿಗಳಿಗೆ ಕಾಯುವುದನ್ನು ನಿಲ್ಲಿಸಿದ್ದೇವೆ. ಯಾವ ಆಫೀಸರು ಅಗತ್ಯವೋ ಅವರೇ ಬರಬೇಕು, ಬಾಕಿ ಆಫೀಸರು ಬರಬೇಕಾಗಿಲ್ಲ ಎಂದು ಹೇಳಿದ್ದೇವೆ. ಮಂತ್ರಿಗಳಿಗೆ ಚಪ್ಪರಗಳು ತೋರಣಗಳು ಬೇಡ, ಗಾರ್ಡ್ ಆಫ್ ಆನರ್ ಬೇಡ ಎಂದು ನಿಲ್ಲಿಸಿದ್ದೇವೆ. ಮಂತ್ರಿಗಳು ಮನೆ ಮುಂದೆ ಹೋದಾಗ ಟಿಪ್, ಟಾಪ್, ಎಂದು ಬಂದೂಕಗಳನ್ನು ಹಿಡಿದು ನಿಲ್ಲುವುದನ್ನು ನಿಲ್ಲಿಸಿದ್ದೇವೆ.

ಶ್ರೀ ಜಿ. ಎಲ್. ಪುಟ್ಟಣ್ಣ.—ಫ್ಲಾಗ್ ತೆಗೆಯುತ್ತೀರಾ ?

ಶ್ರೀ ಟಿ. ಮರಿಯಪ್ಪ.—ಅದರಿಂದ ದುಡ್ಡು ಖರ್ಚಾಗುವುದಿಲ್ಲ. ಅದಕ್ಕೆ ವ್ಯಾಮೋಹಪಟ್ಟು ಮಾಡುತ್ತಾ ಇಲ್ಲ. ನಾನು ಖಾಸಗಿಯವನಾಗಿಯೂ ಇದ್ದು ನೋಡಿದ್ದೇನೆ. ಮಂತ್ರಿಯಾಗಿಯೂ ಇದ್ದು ನೋಡಿದ್ದೇನೆ. ಏನಿದ್ದರೂ ಹೊಸಬರಿಗೆ ಮಾತ್ರ ಅದು ಆಕರ್ಷಣೀಯವಾಗಿರುತ್ತದೆ. ಬಾಕಿಯವರಿಗೆ ನಿಸ್ಸಾರವಾಗಿದೆ. ನೀರಿನಲ್ಲಿರುವ ಮೀನು ನೀರನ್ನು ಕುಡಿಯುತ್ತದೆಯೋ ಇಲ್ಲವೋ ಎಂದು ಕುತೂಹಲದಿಂದ ನೋಡುವ ಹಾಗೆ, ನೀವು ಎಷ್ಟು ವರ್ಷ ಕಾಯಬೇಕೋ ಅಷ್ಟು ವರ್ಷ ಕಾದು ಕೂತಿರಿ. ಹೊರಗಡೆಯವರಿಗೆ ಪಾಂಪ್ ಮತ್ತು ಷೋ ರುಚಿಕರವಾಗಿರಬಹುದು. ನಮಗೆ ಎಳ್ಳಷ್ಟೂ ರುಚಿಕರವಾಗಿಲ್ಲ. ನಾವು ಟೂರ್ ಜಾಸ್ತಿ ಮಾಡಿಕೊಂಡಿದ್ದೇವೆ ಎಂದು ಹೇಳುತ್ತಾರೆ. ಆದರೆ ಒಬ್ಬೊಬ್ಬ ಮಿನಿಸ್ಟರು ಒಂದೊಂದು ಡಿಸ್ಟ್ರಿಕ್ಟಿಗೆ ಹೋಗಬೇಕು, ಇಬ್ಬರೂ ಒಂದೇ ಡಿಸ್ಟ್ರಿಕ್ಟಿಗೆ ಒಂದೇ ಸಾರಿ ಹೋಗಕೂಡದು ಎಂದು ತೀರ್ಮಾನ ಮಾಡಿಕೊಂಡಿದ್ದೇವೆ. ಜಾಸ್ತಿ ಟೂರ್ ಹೋಗಕೂಡದು ಎಂದೂ ತೀರ್ಮಾನ ಮಾಡಿಕೊಂಡಿದ್ದೇವೆ. ಮಲೆನಾಡಿನ ಕಾನ್ಫರೆನ್ಸನ್ನು ಇನ್‌ಸ್ಟೆನ್ಸ್ ಆಗಿ ಇಟ್ಟುಕೊಂಡು ಅದನ್ನೇ ಜನರಲೈಸ್ ಮಾಡಬಾರದು ಎಂದು ಹೇಳುತ್ತೇನೆ. ಹೇಳಿದ್ದನ್ನೇ ಹೇಳುವುದರಿಂದ ಏನು ಪ್ರಯೋಜನ ? ಬೇರೆ ಕಡೆಗೆ ಎಷ್ಟೆಷ್ಟು ಸಾರಿ ಹೋಗಿದ್ದೇವೆ ಎಂದು ಉದಾಹರಣೆ ಕೊಟ್ಟರೆ ಅದನ್ನು ತಿದ್ದಿಕೊಳ್ಳುತ್ತೇವೆ. To err is human. ತಪ್ಪಿದ್ದರೆ ತಿದ್ದಿಕೊಳ್ಳುತ್ತೇವೆ.

ಶ್ರೀ ಸಿ. ಜೆ. ಮುಕ್ಕಣ್ಣಪ್ಪ (ಗುಬ್ಬಿ).—ಒಂದು ಉದಾಹರಣೆ ಹೇಳುವುದಾದರೆ, ಮೊನ್ನೆ ತುಮಕೂರಿಗೆ ಮೂರು ಜನ ಮಿನಿಸ್ಟರೂ ಒಂದೇಸಾರಿ ಬಂದಿದ್ದರು.

ಶ್ರೀ ಟಿ. ಮರಿಯಪ್ಪ.—ಶ್ರೀ ಮುಕ್ಕಣ್ಣಪ್ಪನವರ ಪೂರ್ವೋತ್ತರ ನನಗೆ ಗೊತ್ತಿದೆ. ಅದನ್ನು ಹೇಳಿದರೆ ಸದಸ್ಯರೇ ಅರ್ಥಮಾಡಿಕೊಳ್ಳಬಹುದು.

ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—ನಿಮ್ಮ ಪೂರ್ವೋತ್ತರ ನನಗೆ ಗೊತ್ತಿದೆ.

All the three Ministers, namely, the Minister for Agriculture, the Minister for Home and the Public Works Minister were in Tumkur District on one day. There was not even an officer to receive the Public Works Minister.

ಶ್ರೀ ಟಿ. ಮರಿಯಪ್ಪ.—ನಮ್ಮನ್ನು ಎದುರು ಗೊಳ್ಳುವುದಕ್ಕೆ ಯಾರೂ ಬರಬೇಕಾಗಿಲ್ಲ. ಅವರ ಹಾಜರಿ ಅಗತ್ಯವಿದ್ದರೆ ಹೇಳಿಕಳುಹಿಸುತ್ತೇವೆ. ಇಲ್ಲದಿದ್ದರೆ ಇಲ್ಲ.

Sri H. K. VEERANNA GOWDH (Minister for Public Works).—I do not want any officer to wait on me.

ಶ್ರೀ ಟಿ. ಮರಿಯಪ್ಪ.—ನಾವು ಎಲ್ಲೆಲ್ಲಿ ತಪ್ಪು ಮಾಡುತ್ತೇವೋ ಅದನ್ನು ತೋರಿಸಿ ಕೊಡಿ. ಏನೋ ಕಾರಣಾಂತರದಿಂದ ತುಮಕೂರಿಗೆ ಹೋಗಬೇಕಾದರೆ ಆಗ ಏನು ಮಾಡಬೇಕಾಗುತ್ತದೆ ?

ಶ್ರೀ ಎಚ್. ಕೆ. ವೀರಣ್ಣಗೌಡ.—ನಾವು ತುಮಕೂರು ಡಿಸ್ಟ್ರಿಕ್ಟಿಗೆ ಡಿಫರೆಂಟ್ ಏರಿಯಾಗಳಿಗೆ ಹೋಗಿದ್ದೆವು.

ಶ್ರೀ ಟಿ. ಮರಿಯಪ್ಪ.—ಅಗತ್ಯ ಕಾರ್ಯಕ್ಕೆ ಹೋಗಲೇಬೇಕಾಗುತ್ತದೆ. ಹೋಗದೆ ಹೋದರೆ ಕೆಲಸ ಕಾರ್ಯಗಳು ನಡೆಯುವುದಿಲ್ಲ. ಅದನ್ನು ಯೋಚನೆ ಮಾಡಬೇಕು. ಶ್ರೀಮಾನ್ ಮಾದಪ್ಪನವರು ಐಡಿಯಲಾಜಿಕಲ್ ಸ್ಕೀಮುಗಳಿಗೆ ಬಹಳ ಹಣ ಖರ್ಚು ಮಾಡುತ್ತಿದ್ದಾರೆ ಎಂದು ಹೇಳಿದರು. ಅವರು ಬಜೆಟ್ ವಿಮರ್ಶೆ ಮಾಡಿದರೆ ನಿಷ್ಠೂರ ಬಂದರೂ ಬರಲಿ ಎಂದು ನಾನು non-plan ಖರ್ಚಿಗೆಲ್ಲಾ ಹಿಡಿದು ಹಾಕಿದ್ದೇನೆ ಎಂಬುದು ಗೊತ್ತಾಗುತ್ತದೆ. N.E.S.ಮತ್ತು C.D. ಬ್ಲಾಕ್ ಐಡಿಯಲಾಜಿಕಲ್ ಸ್ಕೀಮ್ . . .

ಶ್ರೀ ಯು. ಎಂ. ಮಾದಪ್ಪ (ಚಾಮರಾಜನಗರ).—ಅಲ್ಲಿಯ ಸ್ಟಾಫ್ ವಿಷಯ ಹೇಳಿ.

ಶ್ರೀ ಟಿ. ಮರಿಯಪ್ಪ.—ಅದನ್ನು ಐಡಿಯಲಾಜಿಕಲ್ ಸ್ಕೀಮು ಎಂದು ಹೇಳುವುದಕ್ಕಾಗುವುದಿಲ್ಲ. ಮೈಸೂರು ದೇಶದಲ್ಲಿ 1932ನೇ ಇಸ್ವಿಯಲ್ಲಿ ಮೊದಲು ಮಾದರಿ ಹಳ್ಳಿಗಳ ಸ್ಕೀಮನ್ನು ಪ್ರಾರಂಭ ಮಾಡಿದರು. ಅನಂತರ ಹೋಬಳಿ ಸ್ಕೀಂ, ಕಾಂಪ್ರಹೆನ್ಸಿವ್ ರೂರಲ್ ಡವಲಪ್‌ಮೆಂಟ್ ಸ್ಕೀಮನ್ನು ಮಾಡಿದರು. ಮೈಸೂರು ದೇಶದಲ್ಲಿ ಏನು ಮಾಡಿದ್ದಾರೋ ಅದನ್ನು ಸ್ವಲ್ಪ ಬದಲಾವಣೆ ಮಾಡಿ ಪ್ಲಾನಿಂಗ್ ಕಮಿಷನ್ ಅವರು ಕಮ್ಯೂನಿಟಿ ಡೆವೆಲಪ್‌ಮೆಂಟ್ ಮತ್ತು N.E.S. ಸ್ಕೀಮುಗಳನ್ನು ಮಾಡಿದ್ದಾರೆ. ಇದರಲ್ಲಿ ಗ್ರಾಮಾಂತರ ಪ್ರದೇಶಗಳು ಡವೆಲಪ್ ಆಗಬೇಕು ಎಂದು ಇದೆ. ಅದು ಐಡಲಾಜಿಕಲ್ ಸ್ಕೀಮು ಆಗುವುದಿಲ್ಲ. ಬಹಳ ದಿವಸಗಳಿಂದ ಹಿಂದುಳಿದಿರತಕ್ಕ ಗ್ರಾಮಾಂತರ ಪ್ರದೇಶಗಳಿಗೆ ಹೆಚ್ಚು ಗಮನ ಕೊಡಬೇಕು ಎಂದು ಮಾಡುವುದರಲ್ಲಿ ತಪ್ಪು ಇರಬಹುದು. ಅದನ್ನು ಪದೇ ಪದೇ ರೆವ್ಯೂ ಮಾಡುತ್ತಾರೆ. ಪ್ಲಾನಿಂಗ್ ಕಮಿಷನ್ ಅವರು ಇವಾಲ್ಯುವೇಷನ್ ಎಂದುಮಾಡಿ ಅದರಲ್ಲಿರತಕ್ಕ ಹುಳುಕುಗಳನ್ನು ಎತ್ತಿ ತೋರಿಸುತ್ತಾರೆ. ಹೀಗೆ it is constantly under review. Ours is the last word ಎಂದು ಪ್ರತಿಪಾದನೆ ಮಾಡುತ್ತಾ ಇಲ್ಲ. ಇದು ಐಡಿಯಲಾಜಿಕಲ್ ಸ್ಕೀಮು ಅಲ್ಲ. ಅವಶ್ಯಕವಾಗಿ ಬೇಕಾದ ಸ್ಕೀಂ. ಮೈಸೂರಿನಲ್ಲಿ ಸ್ಟಾಫ್ ಸ್ಯಾಂಕ್ಷನ್ ಆಗಿ ಕೆಲಸ ನಿಧಾನವಾದರೆ ಅದನ್ನು ತಿದ್ದುವುದಕ್ಕೆ ಏರ್ಪಾಟು ಮಾಡಿದ್ದೇವೆ. ಸ್ಟಾಫ್ ಹೆಚ್ಚಿಗೆ ತೆಗೆದುಕೊಳ್ಳದೆ ಕೆಲಸ ಆಗಬೇಕು ಎನ್ನುವ ದೃಷ್ಟಿಯಿಂದ ಕೆಲಸ ಮಾಡಬೇಕು.

ಇನ್ನೊಂದು ವಿಷಯ ಕೇಂದ್ರ ಸರ್ಕಾರದಿಂದ ಸಾಲ ತರುತ್ತೀರಿ, ಅದನ್ನೆಲ್ಲಾ ಸಂಬಳ ಸಾರಿಗೆಗಳಿಗೆ ಕೊಟ್ಟು ಬಿಡುತ್ತೀರಿ ಎಂದು ಸದಸ್ಯರು ಹೇಳಿದರು. ದಯವಿಟ್ಟು ಕ್ಷಮಿಸಿ. ಕೇಂದ್ರ ಸರ್ಕಾರದಿಂದ ಸಾಲ ಕೊಟ್ಟ ಹಣವನ್ನು ಬರಿ ಸಂಬಳಗಳಿಗೇ ಕೊಡುವುದಿಲ್ಲ. ಫೈನಾನ್ಸ್ ಮೆಮೋರಾಂಡಂ ತಮ್ಮ ಮುಂದೆ ಇಟ್ಟಿದ್ದೇವೆ. ನಮ್ಮಲ್ಲಿ ಸ್ಪೆಷಲ್ ವರ್ಕ್ಸ್‌ಗೆ ಎಷ್ಟು ಬಜೆಟ್ ಇದೆ ಎಂದು ಹಾಳೆ ತಿರಿವಿ ಹಾಕಿದರೆ ಗೊತ್ತಾಗುತ್ತದೆ. ಕೇಂದ್ರ ಸರ್ಕಾರದವರು ಗ್ರಾಂಟ್ಸ್ ಮತ್ತು ಲೋನ್ಸ್ ಕೊಟ್ಟ

(ಶ್ರೀ ಟಿ. ಮರಿಯಪ್ಪ)

ರುತ್ತಾರೆ. ಅವರು ಯಾವ ಕೆಲಸಕ್ಕಾಗಿ ಹಣವನ್ನು ಕೊಟ್ಟಿರುತ್ತಾರೋ ಎಂದು ಅಕೌಂಟೆಂಟ್ ಜನರಲ್ ನೋಡಿ ಅದಕ್ಕೆ ಅಪ್ರೂವ್ ಆದರೆ ಆಗ ಹಣ ಡ್ರಾ ಮಾಡುವುದಕ್ಕೆ ಒಪ್ಪುತ್ತಾರೆ ಇಲ್ಲದಿದ್ದರೆ ಇಲ್ಲ. ತಮಗೆ ಒಂದು ಉದಾಹರಣೆ ಹೇಳುವುದಾದರೆ, ಲೋಕಲ್ ಬೋರ್ಡ್ ವರ್ಕ್ಸ್‌ನಲ್ಲಿ ಆಡಿಟ್ ಸರ್ಟಿಫಿಕೇಟ್ ಕೊಟ್ಟಿಲ್ಲ ಎಂದು ಇನ್ನೂ ಹಣ ಅಡ್ಜಸ್ಟು ಮಾಡಿಲ್ಲ. ಎಲ್ಲಿಲ್ಲಿಂದ ಆಡಿಟ್ ಸರ್ಟಿಫಿಕೇಟ್ ಬಂದಿಲ್ಲವೋ ಅಲ್ಲಿ ಅಕೌಂಟೆಂಟ್ ಜನರಲ್ ಇನ್ನೂ ಅಡ್ಜಸ್ಟ್ ಮಾಡಿಲ್ಲ. ಕೇಂದ್ರ ಸರ್ಕಾರದವರು ಸ್ಕೀಮುಗಳಿಗೋಸ್ಕರ ಗ್ರಾಂಟ್ ಮತ್ತು ಲೋನ್ಸ್ ಕೊಡುತ್ತಾರೆ. ಆ ಸ್ಕೀಮುಗಳಲ್ಲಿ ಸ್ಟಾಫ್ ಸೇರಿರುತ್ತದೆ ಎಂಬುದನ್ನು ಒಪ್ಪಿಕೊಳ್ಳುತ್ತೇನೆ. ಆ ಯೋಜನೆಗಳಲ್ಲಿ ಇರತಕ್ಕ ಸ್ಟಾಫ್‌ಗಳಿಗೆ ಕೊಟ್ಟಿರತಕ್ಕ ಲೋನ್ಸ್ ಮತ್ತು ಗ್ರಾಂಟನ್ನು ಅವರಿಗೆ ಅಪ್ರೂವ್ ಮಾಡುತ್ತಾರೆ. ಬರಿ ಸಿಬ್ಬಂದಿಗೋಸ್ಕರವೇ ಸಾಲವನ್ನು ಉಪಯೋಗಿಸಿಕೊಂಡಿದ್ದಾರೆ ಎನ್ನುವುದು ಸತ್ಯಕ್ಕೆ ದೂರವಾದ ವಿಚಾರ.

ಶ್ರೀ ಬಿ. ಕೆ. ಪುಟ್ಟರಾಮಯ್ಯ.—ಹಿಂದುಳಿದ ಭಾಗಗಳು ಮೈಸೂರಿಗೆ ಸೇರುವಾಗ ಹಳೆಯ ಮೈಸೂರಿನ ಲೆವಲ್ಲಿಗೆ ತರಲು ಬೇಕಾಗುವ ಖರ್ಚಿನ ಭಾರವನ್ನು ಕೇಂದ್ರ ಸರ್ಕಾರದವರು ವಹಿಸಿಕೊಂಡು ಹಣ ಎಷ್ಟು ಬೇಕಾದರೂ ಕೊಡುತ್ತೇವೆ ಎಂದು ನಿಮ್ಮ ಪಕ್ಕದಲ್ಲಿರುವ ಮಂತ್ರಿಗಳಾದ ಶ್ರೀ ವೀರಣ್ಣ ಗೌಡರ ಎದುರಿನಲ್ಲಿ ಮಾನ್ಯ ನೆಹ್ರೂ ಅವರು ಅಪ್ಪಣೆ ಕೊಡಿಸಿದ್ದರು. ಒತ್ತಾಯ ಮಾಡಿ ಕೇಳುವುದಕ್ಕೆ ನಿಮಗೆ ಶಕ್ತಿಯಿಲ್ಲದಿದ್ದರೆ ನಾವು ಏನು ಮಾಡೋಣ?

ಶ್ರೀ ಟಿ. ಮರಿಯಪ್ಪ.—ಸ್ವಾಮಿ, ಈ ವಿಷಯ ನನ್ನ ಮುಂದೆ ನಡೆದುದಲ್ಲ, ರಿಕಾರ್ಡಿನಲ್ಲೇನೂ ಇಲ್ಲ. ಹಾಗಿರುವಾಗ ಗೊತ್ತಿಲ್ಲದೆ ನಾನಂತೂ ಈ ವಿಚಾರದಲ್ಲೇನೂ ಹೇಳುವುದಕ್ಕಾಗುವುದಿಲ್ಲ, ಯಾರೂ ಹೇಳಲಾರರು, ಹೇಳಿರುವುದೂ ಇಲ್ಲ; ಪ್ಲಾನಿಂಗ್ ಕಮಿಷನ್ ಸಹ ಹೇಳಿಲ್ಲ, ಇಂಡಿಯಾ ಸರ್ಕಾರದವರೂ ಹೇಳಿಲ್ಲ ಎಂದು ಮಾತ್ರ ಹೇಳುತ್ತೇನೆ. ಆದರೆ ಇಷ್ಟು ಮಾತ್ರ ಹೇಳುತ್ತೇನೆ. ಕೇಂದ್ರ ಸರ್ಕಾರದ ಮುಂದೆ ಮತ್ತು ಫೈನಾನ್ಸ್ ಕಮಿಷನ್ ಮುಂದೆ ಇದೆ. ಹೊಸರಾಜ್ಯ ರಚನೆಯಾದ ಮೇಲೆ ಅನೇಕ ಹಿಂದುಳಿದ ಭಾಗಗಳಿವೆ, ಅವುಗಳ ಅಭಿವೃದ್ಧಿಗೆ ಹೆಚ್ಚು ಹಣ ಸಹಾಯ ಬೇಕು ಎಂದು ಕೇಳಿದ್ದೇವೆ. ಪ್ರಾಯಶಃ ಈ ವಿಚಾರ ಸದಸ್ಯರ ನೆನಪಿನಲ್ಲಿರಬಹುದು. ಹುಬ್ಬಳ್ಳಿಯಲ್ಲಿ ಮೆಡಿಕಲ್ ಕಾಲೇಜು ಮತ್ತು ಆಸ್ಪತ್ರೆಯನ್ನು ಸ್ಥಾಪನೆ ಮಾಡಬೇಕೆಂದು ಆಹಾರ ಮಂತ್ರಿಗಳ ಸಭೆಯಲ್ಲಿ ಹೇಳಿದಾಗ ಅದಕ್ಕೆ ಒಪ್ಪಿಗೆ ದೊರೆತಿದೆ. ಶೇಕಡ 75 ಭಾಗ ನಾನ್‌ರೆಕರಿಂಗ್ ಶೇಕಡ 50 ಭಾಗ ರೆಕರಿಂಗ್ ಗ್ರಾಂಟ್ ಇದೆ. ಹೀಗೆ ಸಹಾಯವಿದೆ ಮತ್ತು ವೆಸ್ಟ್‌ಕೋಸ್ಟ್ ರೋಡಿಗೆ 72 ಲಕ್ಷ ರೂಪಾಯಿಗಳ ಔಟ್‌ರೈಟ್ ಗ್ರಾಂಟ್ ಬಡ್ಜೆಟ್ಟಿನಲ್ಲಿ ಕೊಟ್ಟಿದೆ; ಕೇಂದ್ರದವರು ಸಹಾಯ ಮಾಡದೆ ಹೋಗುವುದಿಲ್ಲ. ಹೊಸ ಪ್ರದೇಶ, ಹಳೆಯ ಪ್ರದೇಶ ಎಂದು ಭೇದಭಾವನೆಯಿರಬಾರದು; ಎಲ್ಲಾ ಸೇರಿ ಹೊಸ ಮೈಸೂರಾಗಿದೆಯೆಂದು ಹೇಳಿದರೆ ಅದು ಭೂಷಣ. ಕೇಂದ್ರ ಸರ್ಕಾರದವರಿಗೆ ಹಿಂದುಳಿದ ಭಾಗಗಳಿಗಾಗಿ ಸಹಾಯ ಮಾಡಬೇಕೆಂದು ಹೇಳಿದ್ದೇವೆ. ಸಾಲವನ್ನು ಸಿಬ್ಬಂದಿ ಮತ್ತು ರೊಟೀನ್ ಅಡ್ಮಿನಿಸ್ಟ್ರೇಷನ್ನಿಗೆ ಮಾತ್ರ ಉಪಯೋಗಿಸಿಲ್ಲವೆಂದು ಹೇಳಬಯಸುತ್ತೇನೆ.

ಶ್ರೀಯುತರುಗಳಾದ ಮಂಜಯ್ಯಶೆಟ್ಟಿ, ದುಗ್ಗಪ್ಪ ನಾರಾಯಣಸ್ವಾಮಿ, ಲಿಂಗೇಗೌಡ ಮೊದಲಾದವರೆಲ್ಲಾ ಹೊಸ ಸಂಬಳಸಾರಿಗೆ ವಿಷಯವನ್ನು ಪ್ರಸ್ತಾಪ ಮಾಡಿದ್ದಾರೆ. ಕೆಲವರು ಅದನ್ನು ಸ್ವಾಗತಿಸಿದ್ದಾರೆ. ಸರ್ಕಾರಿ ನೌಕರರಿಗೆ ಮಾತ್ರ ಹೊಸ ಸ್ಕೇಲನ್ನು ಕೊಟ್ಟಿರಿ, ಸ್ಥಳೀಯ ಸಂಸ್ಥೆಗಳಲ್ಲಿ ಕೆಲಸಮಾಡುವ ನೌಕರರಿಗೆ ಮತ್ತು ಸ್ಥಳೀಯ ಸಂಸ್ಥೆಗಳು ನಡೆಸುವ ಶಾಲಾ ಉಪಾಧ್ಯಾಯರಿಗೆ ಅದನ್ನು ಕೊಡಲಿಲ್ಲ ಎಂದು ಕೆಲವರು ಹೇಳಿದ್ದಾರೆ. ಅದಕ್ಕಾಗಿ ಆಲೋಚನೆಮಾಡಿ ಸ್ಥಳೀಯ ಸಂಸ್ಥೆಗಳಿಗೆ ಹೊಸಸ್ಕೇಲನ್ನು ಕೊಡುವುದಕ್ಕೆ ಎಷ್ಟುಮಟ್ಟಿಗೆ ಶಕ್ತಿಯಿದೆಯೆಂಬುದನ್ನು ಪರಿಶೀಲಿಸಲು ಎರಡು ಸಮಿತಿಗಳನ್ನು, ಕೊಡುವ ದೃಷ್ಟಿಯಿಂದಲೇ, ರಚನೆಮಾಡಿರುವುದು ಗೊತ್ತೇ ಇದೆ. ಶ್ರೀ ದುಗ್ಗಪ್ಪನವರು ಹಳೆಯ ಮೈಸೂರು ಅಸೆಂಬ್ಲಿಯಲ್ಲಿ ಮಾಡಿದ್ದ ನಿರ್ಣಯದ ವಿಚಾರವನ್ನು ಪ್ರಸ್ತಾಪ ಮಾಡಿದ್ದಾರೆ; ಅದನ್ನು ಈಗ ಹೊಸ ಅಸೆಂಬ್ಲಿಯಲ್ಲಿ ಪ್ರಸ್ತಾಪ ಮಾಡದೆ ಬಿಟ್ಟಿದ್ದರೆ ಚೆನ್ನಾಗಿತ್ತು. ಎಷ್ಟಾದರೂ ಶ್ರೀ ದುಗ್ಗಪ್ಪನವರು ಜಾಣರು. ಒಂದು ಸಾವಿರ ರೂಪಾಯಿಗಳಿಗೆ ಮೇಲ್ಪಟ್ಟು ಯಾರಿಗೂ ಸಂಬಳವಿರಬಾರದೆಂದು ಹಿಂದೆ ನಿಷ್ಕರ್ಷೆಮಾಡಿತ್ತು, ಅದನ್ನು ಮೀರಿ ಈಗ ರಿವೈಜ್ ಮಾಡಿದ್ದಾರೆ ಎಂದು ಹೇಳಿದ್ದಾರೆ. ಪ್ರಸ್ತಾಪ ಮಾಡಿದ್ದರಿಂದ ಅವರಿಗೆ ಉತ್ತರ ಹೇಳಬೇಕಾಗಿದೆ. ಹೊಸ ರಾಜ್ಯಕ್ಕೆ ಹಿಂದೆ ಮಾಡಿದ ನಿರ್ಣಯ ಅನ್ವಯಿಸುವುದಿಲ್ಲ. ಆದರೂ ಸಹ ಮಾನ್ಯ ಸದಸ್ಯರು ಈ ಸಭೆಯಮುಂದೆ ಹಿಂದೆ ನಿರ್ಣಯ ಮಾಡಿದುದನ್ನು ಹೇಳಿರುವುದರಿಂದ ಅದಕ್ಕೆ ಉತ್ತರ ಕೊಡಬೇಕಾಗಿದೆ. ಹಿಂದೆ ಆ ನಿರ್ಣಯವಾದಾಗ ಆ ಸಭೆಯಲ್ಲಿ ನಾನೂ ಸಹ ಸದಸ್ಯನಾಗಿದ್ದೆ. ಆ ನಿರ್ಣಯವನ್ನು ಒಂದು ಸಮಿತಿ ಪರಿಶೀಲಿಸಿದೆ; ಮ್ಯಾಸ್ಕರನ್‌ಹ್ಯಾಸ್ ಸಮಿತಿಯವರು ಪರಿಶೀಲಿಸಿ ತಮ್ಮ ಅಭಿಪ್ರಾಯವನ್ನು ಸೂಚಿಸಿದ್ದಾರೆ. ಒಂದು ಸಾವಿರ ರೂಪಾಯಿಗಳಿಗೆ ಮೇಲ್ಪಟ್ಟು ಸಂಬಳವಿರಬಾರದೆಂದು ನಿರ್ಣಯಮಾಡಿರುವುದನ್ನು ಸಂಸ್ಥಾನದಲ್ಲಿ ಕಾರ್ಯರೂಪಕ್ಕೆ ತರುವುದು ಬಹಳ ಕಷ್ಟ. ಇದು ಆಲ್ ಇಂಡಿಯಾ ಸೆಟಪ್‌ನಲ್ಲಿ ನಿರ್ಣಯವಾಗಬೇಕೇ ಹೊರತು ಸಂಸ್ಥಾನ ಸರ್ಕಾರ ಪರಿಶೀಲಿಸುವುದು ಕಷ್ಟ. ಅಲ್ಲದೆ, I.A.S. ಮತ್ತು I.P.S. ಆಫೀಸರುಗಳಿದ್ದಾರೆ, ಅವರ ಸಂಬಳ ಸಾರಿಗೆಗಳನ್ನು ನಿಷ್ಕರ್ಷೆಮಾಡುವ ಅಧಿಕಾರ ಈ ಸಭೆಗಿಲ್ಲ, ವಿಷಯ ಈ ರೀತಿಯಿದೆ. ಇದು ಬಹಳ ಕಷ್ಟದ ಕೆಲಸ. ಹಳೆಯ ಮೈಸೂರು ಅಸೆಂಬ್ಲಿಯಲ್ಲೇ ಶ್ರೀ ದುಗ್ಗಪ್ಪನವರು ಈ ಪ್ರಶ್ನೆಯನ್ನು ಎತ್ತಿದ್ದರೆ ಚೆನ್ನಾಗಿತ್ತು. ಈಗ ಹೇಳುವುದಕ್ಕೆ ಅಧಿಕಾರವಿಲ್ಲ, ಖಂಡಿತ ಇಲ್ಲ. ನಿರ್ಣಯವನ್ನು ಕಾರ್ಯಗತಮಾಡುವುದು ಕಷ್ಟವೆಂದು ಮ್ಯಾಸ್ಕರನಾಸ್ ಸಮಿತಿ ಅಭಿಪ್ರಾಯ ಪಟ್ಟಿದೆ. ಇದು ಭಾರತಾದ್ಯಂತ ಅನ್ವಯವಾಗುವ ನೀತಿಯಾಗಬೇಕು. ಅಲ್ಲದೆ ಐ. ಎ. ಎಸ್. ಮತ್ತು ಐ. ಪಿ. ಎಸ್. ಅಧಿಕಾರಿಗಳ ಸಂಬಳಗಳನ್ನು ಗೊತ್ತುಮಾಡುವವರು ಕೇಂದ್ರದವರು. ಸಂಬಳವನ್ನು ಒಂದು ಸಾವಿರ ರೂಪಾಯಿಗಳಿಗೆ ಮೇಲ್ಪಟ್ಟು ಈಗ ಕೊಡಬೇಡಿ ಎಂದು ಹೇಳಿದರೆ wishful thinking ಆಗುತ್ತದೆ. ಸಂಬಳ ಸಾರಿಗೆ ವಿಮರ್ಶೆ ಮಾಡುವಾಗ ಡಿಸ್ಪ್ಯಾರಿಟಿ ಹೆಚ್ಚು ಇರಬಾರದು. ಅತ್ಯಂತ ಕಡಮೆ ಮತ್ತು ಅತ್ಯಂತ ಹೆಚ್ಚಿನ ಸಂಬಳದ ಅಂತರ ಹೆಚ್ಚಾಗಿರಬಾರದು, ಸಮತಾವಾದ ಸಮಾಜ ರಚಿಸಬೇಕೆಂದಿರುವುದಕ್ಕೆ ಸಂಬಳಗಳಲ್ಲಿ ಹೆಚ್ಚು ಅಂತರವಿರುವುದು ಸರಿಯಲ್ಲ, ಇತ್ತೀಚೆಗೆ ಅನೇಕ ಸಾರ್ವಜನಿಕ ಸಭೆಗಳಲ್ಲಿ ಅಂತರ ಕಡಮೆ ಮಾಡಬೇಕೆಂಬ ವಾದ ವಿದೆ ಎಂಬುದನ್ನು ಗಮನಿಸಿ ಆ ದೃಷ್ಟಿಯಿಂದ, for the first time in the history of Mysore or history of any other State,

ಕಡಮೆ ಮತ್ತು ಹೆಚ್ಚಿನ ಸಂಬಳದ ಅಂತರ 1:30 ರೇಷಿಯೋದಲ್ಲಿರಬೇಕು ಎಂದು ಸ್ಕೇಲನ್ನು ಗೊತ್ತು ಮಾಡಿದೆವು. ಹೆಚ್ಚು ಅಭಿವೃದ್ಧಿ ಕೆಲಸಗಳಾಗಿ ಆದಾಯ ಹೆಚ್ಚಾಗಿ ಬಂದರೆ ಕಡಮೆ ಸಂಬಳವಿರುವವರಿಗೆ ಹೆಚ್ಚಿಸಿ ಅಂತರ ಕಡಮೆ ಮಾಡೋಣ ಎಂದು ಯೋಚಿಸಿ ಕನಿಷ್ಠ 50 ರೂಪಾಯಿಗಳು (ತುಟ್ಟಿ ಭತ್ಯ ಸೇರಿ), ಪರಮಾವಧಿ 1,500 ರೂಪಾಯಿಗಳು ಇರಲೆಂದು ಸಂಬಳದ ಸ್ಕೇಲು ಗಳನ್ನು ಗೊತ್ತುಮಾಡಲಾಗಿದೆಯೆಂದು ನನ್ನ ಮೊದಲ ಭಾಷಣದಲ್ಲೇ ಮನವಿಮಾಡಿದ್ದೇನೆ. ಹೀಗೆ ಗೊತ್ತುಮಾಡಿದ್ದನ್ನು ಅನೇಕರು ಸ್ವಾಗತಿಸಿದ್ದಾರೆ. ಶ್ರೀ ದುಗ್ಗಪ್ಪನವರು ಹೇಳಿದಂತೆ ಕಾರ್ಯರೂಪಕ್ಕೆ ತರುವುದು ಬಹಳ ಕಷ್ಟ. ಮದರಾಸಿನಲ್ಲಿ 1,500 ರೂಪಾಯಿಗಳ ಸಂಬಳವಿದ್ದರೂ ಸರಿಯಾದ ಜನ ಸಿಕ್ಕುವುದು ಕಷ್ಟ. ಕೇಂದ್ರದಲ್ಲಿ ಯಾವ ರೀತಿಯಿದೆಯೆಂಬುದು ಗೊತ್ತಿದೆ. ಬೆಂಗಳೂರಿನಲ್ಲಿ ಕೇಂದ್ರದ ಅನೇಕ ಸಂಸ್ಥೆಗಳಿವೆ; ಅಲ್ಲ ಈಗಲೂ ಅಧಿಕಾರಿಗಳ ಸಂಬಳ ಬಹಳ ಜಾಸ್ತಿಯಿದೆ. ಈ ವಿಚಾರದಲ್ಲಿ ಪದೇ ಪದೇ ಕೇಂದ್ರದವರಿಗೆ ಮನವಿ ಮಾಡಿದ್ದೇನೆ. ಸಂಬಳ ಸಾರಿಗೆ ಆಲ್ ಇಂಡಿಯಾ ಲೇವಲ್‌ನಲ್ಲಿ ತೀರ್ಮಾನ ಮಾಡುವುದು ಬಹಳ ಅಗತ್ಯ; ಇಲ್ಲದಿದ್ದರೆ ಭಿನ್ನಾಭಿಪ್ರಾಯ, ಅಸಮಾಧಾನ ನೌಕರರಲ್ಲುಂಟಾಗಿರುವುದು ಹೆಚ್ಚಿ ಬಹಳ ಕಷ್ಟವಾಗುತ್ತದೆ. ಆದ್ದರಿಂದ ಈ ವಿಚಾರದಲ್ಲಿ ಅನಾವಶ್ಯಕವಾಗಿ ಟೀಕೆ ಮಾಡುವುದು ಸರಿಯಲ್ಲವೆಂದು ಇಷ್ಟುಮಾತ್ರ ಹೇಳುತ್ತೇನೆ.

ಶ್ರೀ ನಾರಾಯಣಸ್ವಾಮಿಯವರು ಒಂದು ವಿಷಯವನ್ನು ಪ್ರತಿಪಾದನೆಮಾಡಿದರು. ಸಂಬಳಸಾರಿಗೆಯು ಜೀವನದ ವೆಚ್ಚಕ್ಕೆ, ಆಹಾರ ಪದಾರ್ಥಗಳ ಬೆಲೆಗಳ ಏರಿಕೆಗೆ ಅನುಗುಣವಾಗಿರಬೇಕು ಎಂದು ಅವರು ಹೇಳಿದರು. ಅದರ ತತ್ವವನ್ನು ನಾನು ಒಪ್ಪುತ್ತೇನೆ. ಆದರೆ ಕಾರ್ಯತಃ ಅದರಂತೆ ನಡೆಯುವುದಕ್ಕೆ ಬಹಳ ಕಷ್ಟವಾಗುತ್ತದೆ. ತುಟ್ಟಿಭತ್ಯದ ವಿಚಾರ ಪ್ರಸ್ತಾಪಿಸಿ cost of living indexಗೆ ಅನುಗುಣವಾಗಿ ತುಟ್ಟಿ ಭತ್ಯ ಹೆಚ್ಚುಕಡಮೆಯಾಗುತ್ತಾ ಹೋಗಬೇಕು ಎಂದು ಹೇಳಿದರು. ಕೆಲವು ಕಾರ್ಖಾನೆಗಳಲ್ಲಿ ಬೆಲೆಗನುಗುಣವಾಗಿದೆ. ಬೆಲೆಗನುಗುಣವಾಗಿ ತುಟ್ಟಿಭತ್ಯವಿರಬೇಕೆಂಬುವಾದ ತಾತ್ವಿಕ ದೃಷ್ಟಿಯಿಂದ ಸ್ವಾಗತಾರ್ಹವಾದರೂ, ಸರ್ಕಾರ ಅದನ್ನು ಕಾರ್ಯಗತಮಾಡುವುದು ಬಹಳ ಕಷ್ಟ. ಆದರೂ ಕ್ರಮೇಣ ಮಟ್ಟಿಗೆ ನಾವು ತುಟ್ಟಿ ಭತ್ಯವನ್ನು ಹೆಚ್ಚಿಸಿದ್ದೇವೆ, ಶಕ್ತಿಮೀರಿ ಕೊಡುತ್ತಿದ್ದೇವೆ ಎಂದು ಸೂಚಿಸುತ್ತೇನೆ.

ಶ್ರೀ ಮಂಜಯ್ಯಶೆಟ್ಟರು ಖಾಸಗಿ ಮತ್ತು ಸ್ಥಳೀಯ ಸಂಸ್ಥೆಗಳ ಸ್ಕೂಲುಗಳಿಗೆ, ಸಂಸ್ಥೆಗಳಿಗೆ ಸರ್ಕಾರಿ ಸ್ಕೇಲುಗಳು ಅನ್ವಯವಾಗುವಂತೆ ಮಾಡಬೇಕೆಂದು ಹೇಳಿದರು. ಆ ವಿಷಯ ಪರಿಶೀಲನೆಯಲ್ಲಿದೆ.

ಇನ್ನೊಂದು ವಿಚಾರ ಪ್ರಸ್ತಾಪಮಾಡಿದ್ದಾರೆ. ಮಾರಾಟ ತೆರಿಗೆ ಇಲಾಖೆಯಲ್ಲಿ ತಕ್ಕ ವ್ಯವಸ್ಥೆಮಾಡಿ tighten up ಮಾಡಿದರೆ ಬೇಕಾದಷ್ಟು ಆದಾಯ ಬರುತ್ತದೆಂದು ಶ್ರೀ ಷಂಶುದ್ದೀನ್ ಅವರು ಹೇಳಿದರು. ಅದು ಸರ್ಕಾರದ ಗಮನದಲ್ಲಿದೆ. ತಾವು ಹೊಸ ಕಾನೂನನ್ನು ಅಂಗೀಕಾರ ಮಾಡಿದರೆ ಆಗ ಹೊಸ ರಾಜ್ಯಕ್ಕೆ ತಕ್ಕಹಾಗೆ ಪುನರ್ವ್ಯವಸ್ಥೆಮಾಡಬೇಕು. ಮತ್ತೆ tighten up ಮಾಡಬೇಕು. ಜೊತೆಗೆ ಈ ಆಡಳಿತ ನಿರ್ವಹಣೆಯಿಂದ ತೆರಿಗೆ ಕೊಡುವವರಿಗೇನೂ ತೊಂದರೆಯಾಗಬಾರದು, ಅವರಿಗೆ pin-pricks, harassment, indignity ಇವು ಮೂರೂ ಆಗಬಾರದು ಹೀಗೆ ವ್ಯವಸ್ಥೆಮಾಡಬೇಕು ಎಂದಿದ್ದೇವೆ; ತೆರಿಗೆಕೊಡುವವರಿಗೆ ಕಿರುಕುಳವಿಲ್ಲದಿರುವ ಹಾಗೆ ವ್ಯವಸ್ಥೆಮಾಡಬೇಕು ಎಂದಿದ್ದೇವೆ.

ಇನ್ನೂ ಎರಡು ವಿಷಯಗಳನ್ನು ಶ್ರೀ ಮಾದಪ್ಪನವರು ಮತ್ತು ಇತರರು ಕೆಲವರು ಪ್ರಸ್ತಾಪಮಾಡಿದ್ದಾರೆ; ಸಾರ್ವಜನಿಕ ಸಾಲದ ಹೊರೆ ಮತ್ತು ಸಾಲ ತೀರಿಸುವುದಕ್ಕೆ ಕೊಡುವ ಬಡ್ಡಿ ವಿಷಯ ಪ್ರಸ್ತಾಪಮಾಡಿದ್ದಾರೆ. ನಾನು ಇದನ್ನು ಆಗಲೇ ನನ್ನ ಭಾಷಣದಲ್ಲಿ ತಿಳಿಸಿದ್ದೇನೆ. ಶ್ರೀ ಪುಟ್ಟಸ್ವಾಮಿಯವರು ಈ ವಿಷಯದಲ್ಲಿ ಡಿಸ್ಕ್ರೆಪೆನ್ಸಿಯಿದೆಯೆಂದು ಸೂಚಿಸಿದ್ದಾರೆ, ಶ್ರೀ ನರಸಿಂಹನ್ ಅವರು ಈ ವಿಷಯದಲ್ಲಿ ಬಹಳ ಕುತೂಹಲಿಗಳಾಗಿದ್ದಾರೆ. ಇದರ ವಿಚಾರವನ್ನು ಫೈನಾನ್ಷಿಯಲ್ ಮೆಮೊರಾಂಡಂನಲ್ಲೇ ತಿಳಿಸಲಾಗಿದೆ. ಈ ಸಭೆಯವರು ಈ ವಿಷಯವನ್ನು ಚೆನ್ನಾಗಿ ತಿಳಿದುಕೊಳ್ಳಬೇಕು. ತಿಳಿದುಕೊಂಡರೆ ಸರ್ಕಾರಕ್ಕೂ ಬಹಳ ಸಹಾಯವಾಗುತ್ತದೆ, ನನ್ನ ಕೆಲಸವೂ ಸುಲಭವಾಗುತ್ತದೆ. ದೇಶಕ್ಕೆ ಎಷ್ಟು ಹೊರೆಯಿದೆ ಮತ್ತು ಆಯವ್ಯಯದಲ್ಲಿ ಎಷ್ಟು ಖೋತಾ ಇದೆ ಇವೆರಡನ್ನೂ ವಿಧಿಯಿಲ್ಲದೆ ಸರಿದೂಗಿಸಬೇಕು, ಸುಮ್ಮನೆ ತಪ್ಪು ಮಾಡಿದರು, ಹಣ ಜಾಸ್ತಿ ಖರ್ಚಾಯಿತು. ಎಂದು ಹೇಳಿದರೆ ಪ್ರಯೋಜನವಿಲ್ಲ. ಹೊಸ ರಾಜ್ಯದಲ್ಲಿ ಹೊಸ ಸಮಸ್ಯೆ ಎದುರಿಸುವ ಸ್ಥಿತಿಯಿರುವಾಗ ನಾವು ಪ್ರಾಕ್ಟಿಕಲ್ಲಾಗಿರೋಣ.

ಇದನ್ನು ಹೇಗೆ ಬಗೆಹರಿಸಬೇಕೆನ್ನುವುದನ್ನು ನಾವು ಆಲೋಚನೆಮಾಡಬೇಕು. ಈ ದೃಷ್ಟಿಯಿಂದ ನಮ್ಮಲ್ಲಿರುವ ಸಾಲದ ಹೊರೆ ಎಷ್ಟು ಎನ್ನುವುದನ್ನು ನಾನು ಬಡ್ಜೆಟ್ ಮೆಮೊರ್‍ಯಾಂಡಂನಲ್ಲಿ ಸ್ಥೂಲವಾಗಿ ಹೇಳಿದ್ದೇನೆ. ಈಗ ಇನ್ನೂ ಆಕ್ಯುರೇಟ್ ಅಂಕಿ ಅಂಶಗಳನ್ನು ಕೊಡಲಿಲ್ಲ. ಏಕೆಂದರೆ ಇನ್ನೂ ಫೈನಲ್ಲಾಗಿ ಅಲೊಕೇಷನ್ ಆಗಿಲ್ಲ. ಈಗಿರುವ ಅಂಕಿ ಅಂಶಗಳನ್ನು ಜನಸಂಖ್ಯೆಗನುಗುಣವಾಗಿ ತಯಾರುಮಾಡಿದ್ದೇವೆ. ಶ್ರೀ ಪುಟ್ಟಸ್ವಾಮಿಯವರು ಹೈದರಾಬಾದ್ ವಿಚಾರವಾಗಿ ಕೆಲವು ಅಂಕಿ ಅಂಶಗಳ ಮೇಲೆ ಮಾತನಾಡಿದ್ದಾರೆ. ನನ್ನ ಭಾಷಣದಲ್ಲಿ ಹೇಳಿರುವ ಕೆಲವು ಅಂಕಿ ಅಂಶಗಳು ಅಪ್ರಾಕ್ಸಿಮೇಟ್ ಆಗಿವೆ. ಅಕೌಂಟೆಂಟ್ ಜನರಲ್ ಅವರು ಕೊಟ್ಟಿರುವ ಅಂಕಿ ಅಂಶಗಳನ್ನು ಸಭೆಯ ಮುಂದೆ ಇಟ್ಟಿದ್ದೇನೆ. ಫೈನಲ್ ಅಲೊಕೇಷನ್ ಆದಮೇಲೆ ಕರಾರುವಾಕ್ಕಾದ ಅಂಕಿ ಅಂಶಗಳನ್ನು ಒದಗಿಸುತ್ತೇನೆ. ಸಾಲದ ಹೊರೆ ಸುಮಾರು 72ಕೋಟಿಯಿಂದ 77 ಕೋಟಿ ರೂಪಾಯಿಗಳವರೆಗೂ ಆಗಬಹುದು ಎಂದು ಅಂದಾಜನ್ನು ಇಟ್ಟುಕೊಳ್ಳಬಹುದು. ಇನ್ನು ಕೆಲವು ಮಾನ್ಯ ಸದಸ್ಯರು ಮತ್ತು ಶ್ರೀಮಾದಪ್ಪನವರು ಹಳೆಯ ಮೈಸೂರಿನ ಡೆಟ್ ಸರ್ವಿಸ್ ಚಾರ್ಜಸ್ಸಿಗೆ ಬಡ್ಡಿ ಕೊಡುವುದನ್ನು ಫೈನಾನ್ಸ್ ಎನ್‌ಕ್ವೈರಿ ಕಮಿಟಿಯವರು ಹೇಳಿದಂತೆ ಶೇಕಡ ಹತ್ತು ಭಾಗಕ್ಕಿಂತಲೂ ಮೀರಬಾರದು ಎಂದು ಸಲಹೆ ಮಾಡಿದ್ದಾರೆ. ನಾನು ಒಂದೆರಡುಸಾರಿ ಈ ವಿಷಯವನ್ನು ಹೇಳಿದ್ದೇನೆ. ನಾವು ಕೊಡುವ ಬಡ್ಡಿ 505 ಲಕ್ಷ ರೂಪಾಯಿಗಳು; ಆದರೆ ನಮಗೆ 50 ಕೋಟಿ ರೂಪಾಯಿಗಳ ವರಮಾನವಿದೆ. ಆದ್ದರಿಂದ ಬಡ್ಡಿ ಶೇಕಡ ಹತ್ತಕ್ಕಿಂತ ಹೆಚ್ಚಿಗೆ ಆಗುವುದಿಲ್ಲ. ಸದಸ್ಯರು ಈ ವಿಷಯವನ್ನು ಹೇಳಿದರೆಂದು ನಾನು ಯಾರನ್ನೂ ಆಕ್ಷೇಪಣೆ ಮಾಡುವುದಿಲ್ಲ.

Sri M. C. NARASIMHAN.—What will be the position at the end of the Plan period?

ಶ್ರೀ ಟಿ. ಮರಿಯಪ್ಪ.—ಆ ವಿಷಯವನ್ನೂ ಸಹ ಮುಂದೆ ತಿಳಿಸುತ್ತೇನೆ. ಫೈನಾನ್ಸ್ ಕಮಿಷನ್ನಿನವರು ಬಂದಾಗ್ಗೆ ಅವರು ಏನು ಹೇಳಿದ್ದಾರೆ ಎಂದರೆ ಒಂದು ಹೊಸ ರಾಜ್ಯಕಟ್ಟಬೇಕಾದರೆ ಎಷ್ಟೋ ಬಾಬುಗಳಿಂದ

(ಶ್ರೀ ಟಿ. ಮರಿಯಪ್ಪ)

ನಮಗೆ ಉತ್ಪತ್ತಿ ಬರಬೇಕಾದರೆ ಮೊದಲು ಇನ್‌ವೆಸ್ಟ್ ಮಾಡಬೇಕು. ಮೊದಲು ಇನ್‌ವೆಸ್ಟ್ ಮಾಡದೇ ಇದ್ದರೆ ಯಾವ ಕೆಲಸವೂ ಸಲೀಸಾಗಿ ನಡೆಯುವುದಿಲ್ಲ. ಒಂದು ವೇಳೆ ಆ ರೀತಿ ಇನ್‌ವೆಸ್ಟ್ ಮಾಡಿದರೆ ಯಾವಕೆಲಸಕ್ಕಾಗಿ ಇನ್‌ವೆಸ್ಟ್ ಮಾಡಿದ್ದೇವೋ ಆ ಕೆಲಸ ಪೂರೈಸುವವರೆಗೂ ಅದರಿಂದ ನಮಗೆ ಒಂದು ಕಾಸೂ ಉತ್ಪತ್ತಿ ಕೂಡ ಬರುವುದಿಲ್ಲ. ಕೆಲಸ ಪೂರೈಸಿದ ನಂತರವೇ ಉತ್ಪತ್ತಿಯ ಪ್ರಶ್ನೆ ಬರುತ್ತದೆ. ಈಗ ತುಂಗಭದ್ರಾ ಸ್ಕೀಮಿನಲ್ಲಿ ರಾಯಚೂರು ಕಡೆ ನೀರು ಕೊಡಲು ಸಿದ್ಧವಾಗಿದೆ, ಆದರೆ ಅಲ್ಲಿನ ರೈತರು ಆ ನೀರನ್ನು ಉಪಯೋಗಿಸಿಕೊಂಡು ವ್ಯವಸಾಯಮಾಡುವುದಕ್ಕೆ ಹಿಂದುಮುಂದು ನೋಡುತ್ತಿದ್ದಾರೆ, ಮಳೆಯ ನೀರಿನಿಂದಲೇ ವ್ಯವಸಾಯ ಮಾಡೋಣವೆಂದು ಹೇಳುತ್ತಾರೆ. ಅವರು ಕಾಲುವೆ ನೀರಿನಿಂದ ವ್ಯವಸಾಯಮಾಡುವುದಕ್ಕೆ ಇಷ್ಟಪಡುವುದಿಲ್ಲ. ಏಕೆಂದರೆ ಅಲ್ಲಿ ಫಲವತ್ತಾದ ಭೂಮಿ ಇರುವ ದೆಶೆಯಿಂದ ಮಳೆಯ ನೀರಿನ ಆಶ್ರಯದಿಂದಲೇ ವ್ಯವಸಾಯಮಾಡೋಣ ಎಂದು ಹೇಳುತ್ತಾರೆ. ಒಂದು ವೇಳೆ ಆರೀತಿ ಕಾಲುವೆಗಳಿಂದ ನೀರನ್ನು ಉಪಯೋಗಿಸಿ ವ್ಯವಸಾಯಮಾಡಿದರೆ, ವಾಟರ್‌ರೇಟ್‌ಕೊಡಬೇಕಾಗುತ್ತದೆ ಎಂದು ಈ ನೀರನ್ನು ಉಪಯೋಗಿಸುವುದನ್ನೇ ಕೈಬಿಟ್ಟಿದ್ದಾರೆ. ಅಲ್ಲಿನ ರೈತರಿಗೆ ವ್ಯವಸಾಯಕ್ಕೆ ಬೇಕಾದ ಬುಲ್‌ಡೋಜರ್ಸ್ ಮುಂತಾದ ಉಪಕರಣಗಳನ್ನೆಲ್ಲಾ ಕೊಟ್ಟಿದ್ದೇವೆ. ಆದರೂ ಅವರು ಆ ನೀರನ್ನು ವ್ಯವಸಾಯಮಾಡಲು ಉಪಯೋಗಿಸುತ್ತಿಲ್ಲ. ರೈತರು ಹುಮ್ಮಸ್ಸಿನಿಂದ ಈ ನೀರನ್ನು ಉಪಯೋಗಿಸಿಕೊಂಡು ಇನ್ನೂ ಹೆಚ್ಚಾಗಿ ಬೆಳೆಯಲು ಪ್ರಯತ್ನಮಾಡಬೇಕು. ಆದರೆ ಹೊರಗಿನವರು ಈಗಾಗಲೇ ಅಲ್ಲಿ ಜಮೀನು ಕೊಡಿ, ನಾವು ವ್ಯವಸಾಯ ಮಾಡುತ್ತೇವೆ ಎಂದು ಬಂದು ಕೇಳುತ್ತಿದ್ದಾರೆ. ಆ ಸ್ಥಳಗಳಲ್ಲಿ ರೈತರುಗಳ ಮನಸ್ಸನ್ನು ಪರಿವರ್ತನೆಮಾಡಿ, ಅಲ್ಲಿನ ನೀರನ್ನು ವ್ಯವಸಾಯಕ್ಕೆ ಉಪಯೋಗಿಸುವಂತೆ ಮಾಡದೆ ಹೋದರೆ ಅಲ್ಲಿನ ಜನಗಳು ತರೀ ವ್ಯವಸಾಯ ಮಾಡಲು ಎಲ್ಲಿಯೋ ಹೆದರಿಕೊಂಡಿದ್ದಾರೆಂದು ಗೊತ್ತಾಗುತ್ತದೆ.

Sri Y. VEERAPPA (Hole-Narasipur).—It is something like compelling the unwilling horses to drink water.

ಶ್ರೀ ಟಿ. ಮರಿಯಪ್ಪ.—ಶ್ರೀ ವೀರಪ್ಪನವರು ಹೀಗೆಂದಮೇಲೆ ನಾನೇನು ಹೇಳಲಿ? ಅವರೂ ನಾವೂ ಹೊಂದಿಕೊಂಡು ಕೆಲಸಮಾಡಿದರೆ ದೇಶ ಅಭಿವೃದ್ಧಿಯಾಗುತ್ತದೆ. ಹಾಗಾದರೆ ಹೊರಗಡೆಯವರು ನಾವು ಆ ನೀರನ್ನು ಉಪಯೋಗಿಸಿಕೊಂಡು ವ್ಯವಸಾಯಮಾಡುತ್ತೇವೆ ಎಂದು ಸಿದ್ಧರಾಗಿದ್ದರೆ, ನಾವು ಬೇಡ ಎಂದು ಹೇಳುವುದಕ್ಕಾಗುತ್ತದೆಯೇ ? ನಾವು ಯಾವ ರೇಟನ್ನು ಹಾಕಿದರೂ ಅವರು ಕೊಡುವುದಕ್ಕೆ ಸಿದ್ಧರಾಗಿದ್ದೇವೆ ಎಂದು ಹೇಳುತ್ತಾರೆ.

ಶ್ರೀ ಎಚ್. ಕೆ. ವೀರಣ್ಣಗೌಡ.—ಕೆಲವರು ಆಗಲೇ ಅಲ್ಲಿ ವ್ಯವಸಾಯಮಾಡಲು ಜಮೀನುಗಳನ್ನು ತೆಗೆದುಕೊಂಡಿದ್ದಾರೆ.

ಶ್ರೀ ಟಿ. ಮರಿಯಪ್ಪ.—ಕೋಟ್ಯಾಂತರ ರೂಪಾಯಿಗಳನ್ನು ಹಾಕಿ ಅಣೆಕಟ್ಟುಗಳನ್ನು ಕಟ್ಟಿ, ಅನೇಕ ಜಲಾಶಯಗಳನ್ನು ನಿರ್ಮಿಸಿ, ಆ ನೀರನ್ನು ಉಪಯೋಗಿಸಿಕೊಂಡು ವ್ಯವಸಾಯಮಾಡಿ ಎಂದರೆ ಆ ನೀರು ಬೇಡವೆಂದು ಅಲ್ಲಿನ ರೈತರು ಹೇಳುತ್ತಾರೆ. ಅದು ತುಂಗಭದ್ರಾಯೋಜನೆಗೆ ಸಂಬಂಧಪಟ್ಟುದು. ಬಿಜಾಪುರ ಮತ್ತು ಬೆಳಗಾಂನಿಂದ ಬಂದಿರುವ ನನ್ನ ಕೆಲವು ಮಾನ್ಯಮಿತ್ರರು ತಮ್ಮ ಪ್ರಾಂತಗಳಲ್ಲಿ ನೀರಿನ ಹಂಚಿಕೆ ಸರಿಯಾಗಿ ಕೊಡುತ್ತಿಲ್ಲ, ಅದು ಬಹಳ ಅಗತ್ಯವೆಂದು ಹೇಳಿದರು. ನಾನು ಅಲ್ಲಿನ ಕೆಲವು ಪ್ರಾಂತಗಳಲ್ಲಿ ಸುಮಾರು ಹತ್ತು ಹದಿನೈದು ಮೈಲಿಗಳು ಹೋಗಿ ನೋಡಿದ್ದೇನೆ. ಅಲ್ಲಿ ಅಣೆಕಟ್ಟುಗಳನ್ನು ಕಟ್ಟಿದ್ದೇವೆ. ನೀರು ಸಿದ್ಧವಾಗಿದೆ. ನೀರನ್ನು ವ್ಯವಸಾಯಕ್ಕೆ ಉಪಯೋಗಿಸುವುದಿಲ್ಲ ಎಂದು ಬಿಟ್ಟುಕೊಟ್ಟಿದ್ದಾರೆ. ಒಬ್ಬರೂ ನೀರನ್ನು ಇನ್ನೂ ಉಪಯೋಗಿಸಿಲ್ಲ.

ಶ್ರೀ ಯು. ಎಂ. ಮಾದಪ್ಪ (ಚಾಮರಾಜನಗರ).—ವೆಟ್‌ಲ್ಯಾಂಡ್ಸ್ ಇರುವವರಿಗೆ ನೀರಿನ ಅನುಕೂಲವೇನೋ ಇದೆ. ಆದರೆ ಸಾಕಾದಷ್ಟು ಫೈನಾನ್ಶಿಯಲ್ ಅಸಿಸ್ಟೆನ್ಸ್ ಇಲ್ಲ.

ಶ್ರೀ ಟಿ. ಮರಿಯಪ್ಪ.—ಮಳೆ ಸಕಾಲದಲ್ಲಿ ಆದರೆ ನೀರು ಬೇಡ. ಇಲ್ಲದಿದ್ದರೆ ನೀರು ಬೇಕಾಗುತ್ತದೆ. ಈಗ ರಾಯಚೂರಿನಲ್ಲಿರುವ ಘಟಪ್ರಭಾ ನದಿಯ ಜಲಾಶಯದಲ್ಲಿ ಸೊಗಸಾದ ನೀರು ಇದೆ. ಆದರೂ ಆ ಸ್ಥಳಗಳಲ್ಲಿ ಕ್ಷಾಮ ಬರುತ್ತದೆ. ಅಲ್ಲಿಯ ನೀರಿನಲ್ಲಿ ಒಂದು ತೊಟ್ಟು ನೀರನ್ನೂ ಯಾರೂ ತೆಗೆದುಕೊಂಡಿಲ್ಲ, ವ್ಯವಸಾಯಮಾಡಲು ಉಪಯೋಗಿಸಿಕೊಂಡಿಲ್ಲ. ಅಲ್ಲಿಯ ಜಮೀನು ನಮ್ಮಲ್ಲಿರುವ ಹಾಗೆ ಏರುಪೇರಿಲ್ಲ. ಬಹಳ ಮಟ್ಟವಾದ ಜಮೀನು, ಮಳೆಬಿದ್ದರೆ ಸೊಗಸಾಗಿ ಬೆಳೆಯುತ್ತಾರೆ. ಅಲ್ಲಿ ಹೆಚ್ಚು ಒತ್ತಾಯಮಾಡಿದರೆ ಕಬ್ಬು ಬೆಳೆಯುತ್ತಾರೆಯೇ ವಿನಾ ಬತ್ತ ಬೆಳೆಯುವುದಿಲ್ಲ. ನಾನು ಮಾನ್ಯ ಸದಸ್ಯರಲ್ಲಿ ಈ ವಿಷಯವಾಗಿ ಭರವಸೆಯನ್ನು ಕೊಡುವುದಕ್ಕೆ ತಯಾರಾಗಿದ್ದೇನೆ. ನೀರು ಎಷ್ಟು ಇದೆಯೋ ಅಷ್ಟನ್ನೂ ಒದಗಿಸುತ್ತೇವೆ. ಘಟಪ್ರಭಾದಲ್ಲಿ ಅಲ್ಲಿಯ ಜನರನ್ನು ನಾನು ಅವರು ನೀರನ್ನು ಉಪಯೋಗಿಸಲಿಲ್ಲವೆಂದು ಆಕ್ಷೇಪಣೆಮಾಡುತ್ತಿಲ್ಲ. ಅವರು ತರೀ ವ್ಯವಸಾಯಕ್ಕೆ ಹೊಸಬರು.

ಶ್ರೀ ಎಚ್. ಕೆ. ವೀರಣ್ಣಗೌಡ.—ಅವರಿಗೆ ಬತ್ತ ಬೆಳೆಯುವುದೇ ಗೊತ್ತಿಲ್ಲ.

ಒಬ್ಬ ಸದಸ್ಯರು.—ವಾಸ್ತವವಾಗಿ ಬಡ್ಜೆಟ್ ಚರ್ಚೆಯಾಗುವ ಕಾಲದಲ್ಲಿ, ರಾಜ್ಯಪಾಲರ ಭಾಷಣದಮೇಲೆ ಚರ್ಚೆಯಾಗುವ ಕಾಲದಲ್ಲಿ, ಅಧ್ಯಕ್ಷರ ಅಪ್ಪಣೆ ನಮಗೆ ಸಿಕ್ಕಲಿಲ್ಲ. ನಾನು ರಾಯಚೂರು ವಿಷಯವಾಗಿ ಕೆಲವು ಅಂಶಗಳನ್ನು ಹೇಳಬೇಕಾಗಿತ್ತು. ಅಲ್ಲಿನ ಜನಗಳಿಗೆ ಬತ್ತ ಬೆಳೆಯುವ ಅನುಭವವಿಲ್ಲವೆಂದು ಈಗ ತಾನೆ ಮಂತ್ರಿಗಳು ಹೇಳಿದರು. ಅದು ತಪ್ಪು ಭಾವನೆ. ವಿಜಯನಗರದ ಅರಸರ ಕಾಲದಿಂದಲೂ ನೀರಾವರಿಯಿಂದಲೇ ಅಲ್ಲಿ ವಿಶೇಷವಾಗಿ ವ್ಯವಸಾಯ ನಡೆಯುತ್ತಿದೆ. ಮೊದಲಿನಿಂದಲೂ ಅಲ್ಲಿನ ಜನರಿಗೆ ನೀರು ಉಪಯೋಗದ ಬಗ್ಗೆ ಹೆಚ್ಚಿನ ಇನ್‌ಸೆಂಟಿವ್ ಇಲ್ಲ. ಅಲ್ಲಿ ಒಂದು ಕೋ-ಆಪರೇಟಿವ್ ಸಕ್ಕರೆ ಕಾರ್ಖಾನೆಯನ್ನು ಸ್ಥಾಪಿಸಲು ದೆಹಲಿಯವರು ಲೈಸನ್ಸನ್ನು ಕೊಟ್ಟಿಲ್ಲ. ಅದಕ್ಕೋಸ್ಕರ ಅಲ್ಲಿಯ ಜನಗಳಿಗೆ ಘಟಪ್ರಭಾನದಿಯ ನೀರನ್ನು ಉಪಯೋಗಿಸಲು ಇನ್‌ಸೆಂಟಿವ್ ಇಲ್ಲವೆಂದು ನಾನು ಹೇಳುತ್ತೇನೆ.

ಶ್ರೀ ಟಿ. ಮರಿಯಪ್ಪ.—ನಾನು ಇಂಗ್ಲೀಷ್‌ನಲ್ಲಿ ಹೇಳಿದನೇ, ಸಂಸ್ಕೃತದಲ್ಲಿ ಹೇಳಿದನೇ? ಅಲ್ಲಿನ ಜನರಿಗೆ ಇನ್‌ಸೆಂಟಿವ್ ಇಲ್ಲವೆಂದು ನಾನು ಮೊದಲೇ ಹೇಳಿದೆ. ಕೆರೆಕಟ್ಟೆಗಳನ್ನು ಕಟ್ಟುವ ಸ್ಥಳಗಳಲ್ಲೆಲ್ಲಾ ಸಕ್ಕರೆ ಕಾರ್ಖಾನೆಗಳನ್ನು ಸ್ಥಾಪಿಸುವುದಕ್ಕಾಗುತ್ತದೆಯೇ ? ನಾವು ಷಾರ್ಟ್‌ಟರ್ಮ್ ಕ್ರೆಡಿಟ್ ಕೊಡುವುದಕ್ಕೆ ತಯಾರಾಗಿದ್ದೇವೆ, ವೆಟ್‌ಲ್ಯಾಂಡ್ಸ್‌ಗಳಲ್ಲಿ ಆಹಾರ ಬೆಳೆಯಲು ಕೋಟ್ಯಾಂತರ ರೂಪಾಯಿಗಳನ್ನು ಖರ್ಚು ಮಾಡಲು ತಯಾರಾಗಿದ್ದೇವೆ.

ಶ್ರೀಮತಿ ಬಸವರಾಜೇಶ್ವರಿ (ಮಾನ್ವಿ).—ಅಲ್ಲಿಯ ಜನರಿಗೆ ಖಂಡಿತವಾಗಿ ನೀರಾವರಿಯಿಂದ ವ್ಯವಸಾಯ

ಮಾಡುವ ಅನುಭವವಿಲ್ಲ. ನಮ್ಮ ಪ್ರಾಂತದ ರೈತರು ಸುಮಾರು 25" ಮಳೆ ಬಂದರೆ, ಸಂಪೂರ್ಣವಾಗಿ ಬೆಳೆ ಬೆಳೆಯುತ್ತಾರೆ. ನೀರಾವರಿಯಿಂದ ವ್ಯವಸಾಯ ಮಾಡುವುದಕ್ಕೆ ಇಷ್ಟವಿಲ್ಲ. ಒಂದು ವೇಳೆ ನಾವು ಒತ್ತಾಯಮಾಡಿದರೆ ಅದಕ್ಕೆಲ್ಲಾ ಎಕ್ಸ್‌ಪೆನ್ಸಸ್ ಕೊಡ ಬೇಕಾಗುತ್ತದೆ ಎಂದು ಹೇಳುತ್ತಾರೆ. ಸುಮಾರು ಒಂದು ಎಕರೆ ಭೂಮಿಗೆ ಒಂದು ಸಾವಿರ ರೂಪಾಯಿ ಬೆಲೆಯಾಗುತ್ತದೆಂದು ಅವರಿಗೆ ಬತ್ತ ಬೆಳೆಯುವ ಇಷ್ಟ ಇಲ್ಲ. ಈ ಉದ್ದೇಶದಿಂದ ಆಂಧ್ರದವರೋ, ಬೆಜವಾಡದವರೋ ಬಂದು ಇಲ್ಲಿ ಸಾಲಗಳನ್ನು ಪಡೆದು ತರೀ ವ್ಯವಸಾಯವನ್ನು ಮಾಡುತ್ತಿದ್ದಾರೆ. ಆದ್ದರಿಂದ ಅವರಂತೆಯೇ ನಮ್ಮ ರೈತರಿಗೂ ಸಹ ಇನ್ನು ಮುಂದೆ ನೀರಾವರಿ ವ್ಯವಸಾಯವನ್ನು ಮಾಡಲು ತಕ್ಕ ಅನುಕೂಲಗಳನ್ನು ಒದಗಿಸಿದರೆ ಒಳ್ಳೆಯದು.

ಶ್ರೀ ಟಿ. ಮರಿಯಪ್ಪ.—ನಾನು ಅವರು ಯಾರು, ಎಲ್ಲಿಂದ ಬಂದರು, ಎಂಬ ಹೆಸರನ್ನು ಹೇಳಬಾರದು ಎಂದು ಇದ್ದೆ. ಮಾನ್ಯ ಸದಸ್ಯರೇ ಹೇಳಿದರು.

Sri M. C. NARASIMHAN.—Sir, the provisions of the Irrigation Act of the Old Mysore State required the prior consultation of the people under the atchkat. I do not know if some such thing has been done in relation to these projects. That may be the difficulty. Will the Hon'ble Minister please clarify?

11-30 A.M.

Sri T. MARIAPPA.— Sir, the Hon'ble Member is aware that the Old Mysore Irrigation Act is not in force in Ghataprabha area or Thungabhadra area. They were guided by different considerations.

ಮಾನ್ಯ ಮಹಿಳೆಯರು ಹೇಳಿದ ಹಾಗೆ, ಇದು ಅವರಿಗೆ ಹೊಸದು. 25 ಇಂಚು ಮಳೆ ಕೂಡ ಸರಿಯಾಗಿ ಬೀಳದಿರುವುದರಿಂದ ಬೆಳೆಗಳನ್ನು ಬೆಳೆಯುವುದಕ್ಕಾಗುವುದಿಲ್ಲ. ಅಲ್ಲದೆ ನೀರಿನಲ್ಲಿ ನಿಂತುಕೊಂಡು ಕಷ್ಟಪಟ್ಟು ಕೆಲಸ ಮಾಡಲು ಅಲ್ಲಿಯ ಜನಗಳಿಗೆ ಆಗುತ್ತಿಲ್ಲ. ಇನ್ನೂ ಹೊಂದಿಕೊಳ್ಳಬೇಕು. ಆಗಲೇ ನಾನು ತಮಗೆ ಆ ಕಷ್ಟಗಳನ್ನು ಹೇಳಿದ್ದೇನೆ. ಅಲ್ಲಿಯ ಪರಿಸ್ಥಿತಿ ಹಾಗಿದೆ. ಹೊಸದಾಗಿ ಹೊಂದಿಕೊಳ್ಳಬೇಕು ಎನ್ನುವ ದೃಷ್ಟಿಯಿಂದ ಹೇಳಿದೆ.

ಶ್ರೀ ಬಿ. ಕೆ. ಪುಟ್ಟರಾಮಯ್ಯ.—ಮಾನ್ಯ ಸಚಿವರು ಹೇಳಿದ ಹಾಗೆ, ಮಂಡ್ಯದಲ್ಲಿ ಸಕ್ಕರೆ ಕಾರ್ಖಾನೆ ಆರಂಭವಾಗುವುದಕ್ಕೆ ಮುಂಚೆ ಅಲ್ಲಿಯ ಜನಗಳಿಗೂ ಕಷ್ಟಗಳಾಗಿದ್ದುವು. ಇದು ಮಾನ್ಯ ಮಂತ್ರಿಗಳ ಜಿಲ್ಲಾ ಕ್ಷೇತ್ರದಲ್ಲಿದೆ. ಅವರಿಗೂ ಇದು ಗೊತ್ತು. ಕೃಷ್ಣರಾಜಸಾಗರದ ನೀರು ಬಂದ ಮೇಲೆ, ಈ ಸಕ್ಕರೆ ಕಾರ್ಖಾನೆ ಬಂದ ಮೇಲೆ, ಇಲ್ಲಿಯ ಜನಗಳು ಜಮೀನಿನಲ್ಲಿ ಕೆಲಸಮಾಡಲು ಮುಂದೆ ಬರುತ್ತಿರಲಿಲ್ಲ. ಆಗ ಜಮೀನಿಗೆ ಐದು ರೂಪಾಯಿ ಇದ್ದದ್ದು ಈಗ ಎರಡು ಸಾವಿರ ರೂಪಾಯಿಗಳಾಗಿವೆ. ಯಾವಾಗಲೂ ಮೊದಲು ಈ ರೀತಿಯ ಕಷ್ಟಗಳಾಗುತ್ತವೆ. ನೀರಿನ ಸೌಕರ್ಯ ಬಂತೆಂದು ಬೇಕಾದಷ್ಟು ಭತ್ತ ಬೆಳೆಯಲಾಗುವುದಿಲ್ಲ; ಮತ್ತು ಹೆಚ್ಚಿನ ಉತ್ಪತ್ತಿ ಮಾಡುವುದಕ್ಕಾಗುವುದಿಲ್ಲ. ಮಂಡ್ಯದಲ್ಲಿಯೂ ಮೊದಲು ಇದೇ ರೀತಿಯ ಪರಿಸ್ಥಿತಿಯಾಗಿದ್ದಿತು. ಅದೇ ರೀತಿಯಾಗಿ ಈ ಪ್ರದೇಶಗಳಲ್ಲಿ ಕೇಂದ್ರ ಸರಕಾರವಾಗಲೀ ಅಥವಾ ರಾಜ್ಯ ಸರಕಾರವಾಗಲೀ ಒಂದು ಸಕ್ಕರೆ ಕಾರ್ಖಾನೆಯನ್ನು ಕೋ-ಆಪರೇಟೀವ್ ಬೇಸಿಸ್ ಮೇಲೆ ಒಂದು ಷುಗರ್ ಫ್ಯಾಕ್ಟರಿಯನ್ನು ತೆರೆದರೆ ಆ ಕಡೆಯ ಜನಗಳಿಗೂ ಅನುಕೂಲವಾಗುತ್ತದೆ.

ಶ್ರೀ ಟಿ. ಮರಿಯಪ್ಪ.—ಇದು ಸಲಹೆಯಾಯಿತು. ಉತ್ತರ ಕೊಡುವುದಕ್ಕೆ ಈಗ ಕಾಲಾವಕಾಶವಿಲ್ಲ.

ಅಧ್ಯಕ್ಷರು.— ಕ್ಲಾರಿಫೀಕೇಷನ್ನನ್ನು ಕೇಳುವುದರಲ್ಲಿಯೂ ಒಂದು ರೀತಿಯಿರಬೇಕು. ಹೀಗೆ ತಾವು ಹೇಳುತ್ತಿರುವುದು ಏನಾಗಿದೆ ಎಂದರೆ Putting in the same points ಎನ್ನುವಂತಾಗಿದೆ ಹೀಗಾಗಬಾರದು.

Sri H. K. VEERANNA GOWDH.— The instance is not correct. It is far from truth.

ಶ್ರೀ ವೈ. ವೀರಪ್ಪ.—ಮಾನ್ಯ ಮಂತ್ರಿಗಳಲ್ಲಿ ಒಂದು Clear clarificationಗಾಗಿ ಹೇಳುತ್ತೇನೆ. ನೀರನ್ನು ಕೊಟ್ಟರೂ ಕೂಡ ಜನಗಳು ಸರಿಯಾಗಿ ಕೆಲಸ ಮಾಡುತ್ತಿಲ್ಲ ಎಂದು ತಾವು ಅಪ್ಪಣೆಕೊಡಿಸಿದಿರಿ. ಅಂತಹ ಸಂದರ್ಭಗಳೆಲ್ಲವನ್ನೂ ನೋಡಿ ಒಂದು ಸರ್ವೆ ಮಾಡಿದ್ದೀರಾ ?

ಶ್ರೀ ಟಿ. ಮರಿಯಪ್ಪ.—ನಾನೀಗ ಆ ಗೊಂದಲಕ್ಕೆ ಹೋಗುವುದಿಲ್ಲ. ಒಂದೊಂದು ಕಡೆ ಒಂದೊಂದು ರೀತಿಯಾದ ಹೊಸ ಸನ್ನಿವೇಶಗಳಾಗಿವೆ. ಅದಕ್ಕೆ ತಕ್ಕಂತೆ ಅನುಸರಿಸಿಕೊಂಡು ಹೋಗಬೇಕೆಂದು ಹೇಳಿದೆ. ಈಗ ಮಾನ್ಯ ಸದಸ್ಯರು ಹೇಳಿದ ಹಾಗೆ ಈ ಸಕ್ಕರೆ ಕಾರ್ಖಾನೆಯನ್ನು ಕೋ ಆಪರೇಟೀವ್ ಬೇಸಿಸ್ ಮೇಲೆ ಕೊಡಬೇಕೆಂದು ಎನ್‌ಕರೇಜು ಮಾಡುವುದೇನೋ ಸರಿ. ಆದರೆ ಹೀಗೆ ಈ ಸಕ್ಕರ ಕಾರ್ಖಾನೆಗಳನ್ನು ಕೊಡಬೇಕಾದರೂ ಅದಕ್ಕೂ ಒಂದು ಲಿಮಿಟ್ ಇದೆ. ಹತ್ತು ಲಕ್ಷ ರೂಪಾಯಿಗಳನ್ನು ಖರ್ಚುಮಾಡಿ ಸಂಕೇಶ್ವರೀ ಪ್ರಾಜೆಕ್ಟನ್ನು ಕಟ್ಟಬೇಕೆಂದಾಗ ಡೀಸಲ್ ಆಯಿಲ್ ಪಂಪು ಮುಂತಾದುವುಗಳನ್ನು ತರಲು ಎಷ್ಟು ಕಷ್ಟಗಳಾದುವು ಎಂಬುದು ಎಲ್ಲರಿಗೂ ಗೊತ್ತಿದೆ. ಈಗ ಹೊಸದಾಗಿ ಬಂದಿರುವ ಸದಸ್ಯರಾಗಲಿ ಅಥವಾ ಹಿಂದಿನ ಸದಸ್ಯರಾಗಲಿ ಅವರವರ ಕಷ್ಟಗಳನ್ನು ವಿಮರ್ಶೆಮಾಡಿ ಹೊಸ ಸನ್ನಿವೇಶಗಳಿಗೆ ಹೊಂದಿಕೊಂಡು ಹೋಗಬೇಕಾಗಿದೆ. ನಾನು ಡೆಟ್ ಸರ್ವಿಸಸ್ ವಿಚಾರದಲ್ಲಿ ಪ್ರಸ್ತಾಪ ಮಾಡುತ್ತಿದ್ದರೆ ಈಗ ಅದರಿಂದ ಹೊರಗೆ ಎಷ್ಟೋ ವಿಷಯಗಳು ಬಂದವು. ದೊಡ್ಡದೊಡ್ಡ ಡೆವಲೆಪ್‌ಮೆಂಟ್ ಕೆಲಸಗಳಿಗಾಗಿ ಸಾಲವನ್ನು ಮಾಡಬೇಕಾಗಿ ಬರುತ್ತದೆ. ಆದರೆ ಹೀಗೆ ಸಾಲ ಮಾಡುವ ಹಣವನ್ನು ತೀರಿಸುವುದು ಹೇಗೆ ಎಂಬ ಪ್ರಶ್ನೆ ಬರಬಹುದು. ಆದರೆ ಇನ್‌ವೆಸ್ಟುಮೆಂಟನ್ನು ಇಂತಹ ದೊಡ್ಡ ಕೆಲಸಗಳಿಗೆ ಮಾಡಬೇಕಾದುದು ಅಗತ್ಯ. ನಮ್ಮ ಜನ ಕ್ಷಾಮಕ್ಕೆ ತುತ್ತಾಗದೆ ಇರಬೇಕಾದರೆ ಪ್ರತಿಫಲ ದೊರಕುವುದು ನಿಧಾನವಾದರೂ, ಸಾಲ ಮಾಡಿದ ಹಣವಾದರೂ ಆದನ್ನು ನೀರಾವರಿ ಕಾರ್ಯಗಳಿಗಾಗಿ ವಿನಿಯೋಗಿಸಬೇಕಾಗುತ್ತದೆ ; ಮತ್ತು ಈ ಸಾಲದಲ್ಲಿ ಅರ್ಧ ಭಾಗವನ್ನಾದರೂ ಕೇಂದ್ರ ಸರಕಾರ ಸಬ್ಸಿಡಿ ಅಥವಾ ಗ್ರಾಂಟುಗಳ ರೂಪದಲ್ಲಿ ಕೊಡಬೇಕೆಂದು ನಾವು ಫೈನಾನ್ಸ್ ಕಮಿಷನ್ನು ಇಲ್ಲಿಗೆ ಬಂದಿದ್ದಾಗ ಅವರ ಮುಂದೆ ಇಟ್ಟು ಮೆಮೊರ್ಯಾಂಡಂನಲ್ಲಿಯೂ ತಿಳಿಸಿದ್ದೇವೆ. ಇಮ್ಮಿಡಿಯಟ್ ರಿಟರ್‍ನ್ ಬರುವ ಅಸೆಟ್ಸ್‌ಗಳು ಇವಲ್ಲ ಎಂದು ತಿಳಿಸಿದ್ದೇನೆ. ನಾನು ಇದನ್ನು ಪ್ರತಿಪಾದನೆ ಮಾಡುವುದಕ್ಕಾಗಿ ಈ ಸಾಲದ ವಿಷಯವನ್ನು ಈ ಸಭೆಯ ಸದಸ್ಯರ ಮುಂದೆ ಅರಿಕೆ ಮಾಡಬೇಕೆಂದು ಪ್ರಯತ್ನ ಮಾಡುತ್ತಿದ್ದೆ.

(ಶ್ರೀ ಟಿ. ಮರಿಯಪ್ಪ.)

ಆದರೆ ಈಗ ಬೇರೆ ಸಬ್ಜೆಕ್ಟಿಗೆ ಡಿಸ್‌ಕಷನ್ ಹೋಯಿತು.

ಇನ್ನು ಡೆಟ್ ಸರ್ವಿಸ್ ಚಾರ್ಜುಗಳ ವಿಚಾರದಲ್ಲಿ ಹೇಳಬೇಕಾದರೆ ನಮಗೆ ಬಹಳ ವ್ಯಸನವಾಗಿದೆ; ಮತ್ತು ದೇಶದ ಹಣ ಕಾಸಿನ ಸ್ಥಿತಿ ಅಭದ್ರತೆಯಿಂದ ಇದೆ ಎಂದು ಹೇಳುವುದು ಸರಿಯಾದುದಲ್ಲ. 505ಲಕ್ಷ ರೂಪಾಯಿಗಳಷ್ಟು ಕರೆಂಟು ರೆವೆನ್ಯೂಸ್‌ನಿಂದ ಬಡ್ಡಿಗಾಗಿ ಕೊಡಬೇಕೆಂದು ಹೇಳಿದರೆ ಬಹಳ ವ್ಯಸನವಾಗುತ್ತದೆ. ಅನಾವಶ್ಯಕವಾಗಿ ಸಾಲವನ್ನೇನೂ ತೆಗೆದುಕೊಳ್ಳುವುದಿಲ್ಲ. ಬಹಳ ಅಗತ್ಯವಾದ ಕೆಲಸಗಳಿಗಾಗಿಯೇ ತೆಗೆದುಕೊಳ್ಳಬೇಕಾಗಿದೆ. ಸಾಲಕ್ಕಾಗಿ ಕೊಡುವ ಬಡ್ಡಿಯನ್ನು ಕೇಂದ್ರ ಸರಕಾರದವರಿಗೆ ಸ್ವಲ್ಪ ನಿಧಾನವಾಗಿ ಸಲ್ಲಿಸಲು ಪ್ರಸ್ತಾಪ ಮಾಡಿದರೆ ಅದಕ್ಕೆ ಬೇಕಾದಷ್ಟು ಅಡಚಣೆಗಳುಂಟಾದವು. Let us not go at a tangent. ಆದರೂ ಇಷ್ಟು ಹೇಳುತ್ತೇನೆ. ಹತ್ತು ಪರ್ಸೆಂಟು ಬಡ್ಡಿಯನ್ನಾದರೂ ಕಡಮೆ ಮಾಡಬೇಕೆಂದು ಪ್ರಯತ್ನ ಮಾಡುತ್ತಿದ್ದೇವೆ; ಮತ್ತು ಇನ್ನೂ ಕೆಲವು ಐಟಂಗಳನ್ನು Deferred payment ಆಗಿ ಮಾಡಬಹುದೇನೋ ಎಂದು ಕೇಂದ್ರ ಸರಕಾರದ ಸಹಕಾರವನ್ನು ಕೋರುತ್ತಿದ್ದೇವೆ. ಆದಷ್ಟು ಈ ಸಾಲದ ಹೊರೆಯನ್ನು ಕಡಮೆಮಾಡಬೇಕೆಂಬುದೇ ನಮ್ಮ ಉದ್ದೇಶವಾಗಿದೆ.

ಕೆಲವು ಮಾನ್ಯ ಸದಸ್ಯರು ನಮ್ಮ ಕೈಗಾರಿಕೆ ಸಂಸ್ಥೆಗಳು ಬಹಳ ನಷ್ಟದಿಂದ ಕೆಲಸ ಮಾಡುತ್ತಿವೆ ಎನ್ನುವಂತಹ "ಸ್ವೀಪಿಂಗ್ ರಿಮಾರ್ಕ್ಸ್"ನ್ನು ಮಾಡಿದ್ದಾರೆ. ಅದಕ್ಕೆ ಮಾನ್ಯ ಕೈಗಾರಿಕೆ ಸಚಿವರು ನಿನ್ನೆ ದಿನ ಉತ್ತರ ಕೊಟ್ಟಿದ್ದಾರೆ.

ಶ್ರೀ ಸಿ. ಕೆ. ರಾಜಯ್ಯ ಶೆಟ್ಟಿ.—ನಷ್ಟವಲ್ಲ. ಬರುವ ಆದಾಯ ಕಡಮೆಯಾಗಿದೆ ಎಂದು ತಿಳಿಸಿದರು.

ಶ್ರೀ ಟಿ. ಮರಿಯಪ್ಪ.—ಕೆಲವರು ಹೇಳಿದ್ದಾರೆ. ಅದಕ್ಕೆ ನನ್ನ ಸಹೋದ್ಯೋಗಿಗಳಾದ ಶ್ರೀ ಪೂಣಚ್ಚ ಅವರು ಉತ್ತರ ಕೊಟ್ಟಿದ್ದಾರೆ. ಹೊಸದಾಗಿ ಸರಕಾರದ ವಶಕ್ಕೆ ತೆಗೆದುಕೊಂಡಿರತಕ್ಕ ಕಾರ್ಖಾನೆಗಳಲ್ಲಿ ಸ್ವಲ್ಪ ಕಷ್ಟಗಳು ಒದಗಿರಬಹುದು.

ಶ್ರೀ ಯು. ಎಂ. ಮಾದಪ್ಪ.— ಇನ್ನು ಕೆಲವು ಕಡೆ ಇದೆ. ಇದು ಮೆಮೊರ್ಯಾಂಡಂನಲ್ಲಿದೆ.

ಶ್ರೀ ಟಿ. ಮರಿಯಪ್ಪ.—ನಾವು ತಿಳಿಯದೇ ಇರುವ ಎಷ್ಟೋ ಕಂಪನಿಗಳಿವೆ. ಹೊರಗಿನವರಿಗೆ ಅದನ್ನು ತಿಳಿಯುವಂತೆ ಹೇಳಬೇಕು, ಅಷ್ಟೇ. ಯಾವುದನ್ನೂ ನಿರ್ದಿಷ್ಟವಾಗಿ ಹೇಳಿದರೆ ಉತ್ತಮ.

ಶ್ರೀ ಯು. ಎಂ. ಮಾದಪ್ಪ.—ಅವರು ಹಿಂದೆಯೇ ಕೊಟ್ಟಿದ್ದಾರೆ. ಫೈನಾನ್ಸ್ ಮೆಮೊರ್ಯಾಂಡಂನಲ್ಲಿ ನಿರ್ದಿಷ್ಟವಾಗಿ ಹೇಳಿದ್ದಾಗಿದೆ.

Unfortunately it has not been given at a proper time. I submit, Sir, that only after four days he has submitted.

Sri T. MARIAPPA.—I made a submission to this House that the Finance Department and the Press were working with only about thirty per cent of the complement. In fact, with the greatest difficulty—I had to stay here till 1.30 in the night that day—with practically three or four hands working, the Budget was presented in this House. I request you to kindly bear with me. Now that the position is clear, I wish to state that the Share market is very sensitive. Most of them probably think that the criticism was based on facts and re-act. Therefore, whenever you give suggestions or make criticism, let it be based on hard facts. Then you and I will be on the right path.

ನಮ್ಮ ಸ್ನೇಹಿತರಾದ ಶ್ರೀ ಮಾದಪ್ಪನವರು ದೊಡ್ಡ ದೊಡ್ಡ ಕಂಪೆನಿಗಳಿಗೆ ಸಾಲವನ್ನು ಕೊಟ್ಟು ಬಿಟ್ಟರೆ ಅದನ್ನು ವಸೂಲು ಮಾಡುವುದೇ ಇಲ್ಲವೆಂದು ಹೇಳಿದರು. ಯಾವುದಾದರೂ ನಿರ್ದಿಷ್ಟವಾದ ಒಂದು ನಿದರ್ಶನವನ್ನು ನನ್ನ ಗಮನಕ್ಕೆ ತಂದರೆ ಖಂಡಿತವಾಗಿಯೂ ನಾನು ಸರಿಯಾದ ಕ್ರಮವನ್ನು ತೆಗೆದುಕೊಳ್ಳುತ್ತೇನೆ. ಸಾಲ ಕೊಡಬೇಕು. ಸಂಪೂರ್ಣವಾಗಿ ಕೊಡಬಾರದೆಂದು ನಮ್ಮ ಪಾಲಿಸಿಯಿಲ್ಲ. ಇಷ್ಟು ವಿಶಾಲವಾದ ಮೈಸೂರಿನಲ್ಲಿ ನಮಗೆ ದುಡ್ಡು ಸರಿಯಾಗಿ ಬರುತ್ತಿಲ್ಲವೆಂದು ಇಲ್ಲಿಯವರೆಗೆ ನಮ್ಮ ಗಮನಕ್ಕೆ ಬಂದಿಲ್ಲ. ಆದರೆ ನಾನು ಇಷ್ಟು ಹೇಳುತ್ತೇನೆ: ನಾನು ಫೈನಾನ್ಸ್ ಡಿಪಾರ್ಟುಮೆಂಟನ್ನು ಚಾರ್ಜಿಗೆ ತೆಗೆದುಕೊಂಡಮೇಲೆ ಸರಕಾರಕ್ಕೆ ಬರತಕ್ಕ ಸಾಲಗಳನ್ನು ವಸೂಲು ಮಾಡಬೇಕೆಂದು ಎಲ್ಲ ಇಲಾಖೆಗಳಿಗೂ ಸ್ಟ್ರಿಕ್ಟು ಇನ್‌ಸ್ಟ್ರಕ್ಷನ್ನುಗಳನ್ನು ಕೊಟ್ಟಿದ್ದೇನೆ. ಅದರಂತೆ ಕ್ರಮ ತೆಗೆದುಕೊಳ್ಳುತ್ತಿದ್ದೇವೆ. ಇಲ್ಲಿಯವರೆಗೆ ಅಂತಹದೇನೂ ನಡೆದಿಲ್ಲವೆಂದು ತಮಗೆ ಸರಕಾರದ ಪರವಾಗಿ ಇಲ್ಲಿ ಆಶ್ವಾಸನೆ ಕೊಡುತ್ತೇನೆ.

ಕೆಲವು ಸದಸ್ಯರು ರಾಜ್ಯಾಂಗದ ಅಂಶವನ್ನು ಒತ್ತಿ ಹೇಳುತ್ತ 6 ರಿಂದ 14 ವರ್ಷ ವಯಸ್ಸಿನೊಳಗಿರುವ ಎಲ್ಲ ಮಕ್ಕಳಿಗೂ ಪ್ರಾಥಮಿಕ ವರ್ಗದಿಂದ ಕಡ್ಡಾಯ ಶಿಕ್ಷಣವನ್ನು ಕೊಡಬೇಕೆಂದು ಹೇಳಿದರು. ಇದು ನಿಜವಾದ ಅಂಶ. ಇದರಂತೆ ಎಲ್ಲ ಸಂಸ್ಥಾನ ಸರಕಾರಗಳೂ ಮಾಡುವುದಕ್ಕೆ ಏರ್ಪಾಡು ಮಾಡಬೇಕೆಂದು ಕೇಂದ್ರ ಸರಕಾರದವರು ಸೂಚನೆಯನ್ನೇನೋ ಕಳುಹಿಸಿದ್ದಾರೆ. ಆದರೆ ಅದರಂತೆ ಆಚರಿಸಲು ಇನ್ನೂ ಸಾಧ್ಯವಾಗಿಲ್ಲ. ಒಂದೊಂದು ಕಡೆ ಒಂದೊಂದು ರೀತಿಯಾದ ಪರಿಸ್ಥಿತಿಯಿದೆ. ಮುಖ್ಯವಾಗಿ ಬೇಕಾಗಿರುವುದು ಹಣ ಸಹಾಯ. ಇದನ್ನು ತರತಕ್ಕದ್ದು ಒಳ್ಳೆಯದು, ತರಬೇಕು. ಆದರೆ ಅಶಕ್ತತೆಯಿಂದ ಆಗಿಲ್ಲ. ಆದರೆ ಈಗ ಕೇಂದ್ರ ಸರಕಾರದವರು ಗ್ರಾಮಾಂತರ ಪ್ರದೇಶಗಳಲ್ಲಿ ಎಜ್ಯುಕೇಷನಲ್ ಸರ್ವೇ ಮಾಡಿ ಅಲ್ಲಿಯ ಸ್ಥಿತಿಗತಿಗಳನ್ನು ಪರಿಶೀಲಿಸಿ, ಯಾವ ಯಾವ ಪ್ರದೇಶದಲ್ಲಿ ಎಷ್ಟೆಷ್ಟು ಪ್ರಾಥಮಿಕ ಶಾಲೆಗಳಿವೆ, ಎಲ್ಲೆಲ್ಲಿ ಇಲ್ಲ ಎಂಬುದನ್ನೆಲ್ಲ ವಿಚಾರ ಮಾಡುತ್ತಿದ್ದಾರೆ. ತಮಗೆ ಇಲ್ಲಿ ಒಂದು ವಿಷಯ ಹೇಳುತ್ತೇನೆ. ನಾನು ಉಡುಪಿಗೆ ಹೋಗಿದ್ದಾಗ ಅಲ್ಲಿ ಯಾವ ವಿಧವಾಗಿ ಕಡ್ಡಾಯ ಶಿಕ್ಷಣವಿತ್ತು ಎಂದು ಹೇಳಿದರೆ, ಅಲ್ಲಿಯ ಖಾಸಗಿ ಮಹನೀಯರೇ ಅನೇಕ ಶಾಸನಗಳನ್ನು ನಡೆಸಿಕೊಂಡು ಬರುತ್ತಿದ್ದಾರೆ. ಅಲ್ಲದೆ ಇಲ್ಲಿ ಶೇಕಡ 90 ರಷ್ಟು ಮಕ್ಕಳು ಈ ರೀತಿಯಾದ ಶಾಲೆಗಳಿಗೆ ಹೋಗುತ್ತಿದ್ದಾರೆ.

ನಮ್ಮಲ್ಲಿ ಆ ಮಟ್ಟ ಬರಬೇಕಾದರೆ ನಾವು ಇನ್ನೂ ಎಷ್ಟೋ ಶಾಲೆಗಳನ್ನು ಒದಗಿಸಬೇಕಾಗಿದೆ. ಈಗಾಗಲೇ ವಿದ್ಯಾಭ್ಯಾಸಕ್ಕೆ ಖರ್ಚುಮಾಡುವ ಹಣ ಸುಮಾರು 12 ಕೋಟಿಗೆ ಏರಿದೆಯೆಂಬುದು ತಮ್ಮ ಗಮನಕ್ಕೆ ಬಂದಿರಬಹುದು. ಆದರೂ ತಾವು ಹಣದ ಉತ್ಪತ್ತಿಯನ್ನು ಹೆಚ್ಚುಮಾಡುವ ಬಗ್ಗೆ ಸೂಕ್ತ ಸಲಹೆಗಳನ್ನು ಕೊಟ್ಟು ಸಲಹೆ ಮಾಡಿದಲ್ಲಿ ನಿಜವಾಗಿಯೂ

ವಿದ್ಯಾಭ್ಯಾಸಕ್ಕೆ ಇನ್ನೂ ಹೆಚ್ಚಿನ ಹಣ ಖರ್ಚು ಮಾಡುವುದಕ್ಕೆ ಸರ್ಕಾರದವರು ಸಿದ್ಧರಾಗಿದ್ದಾರೆ.

ಅಧ್ಯಕ್ಷರು.—ಬೊಂಬಾಯಿ ಕರ್ಣಾಟಕದಲ್ಲಿ compulsory ವಿದ್ಯಾಶಿಕ್ಷಣವಿದೆ.

ಶ್ರೀ ಟಿ. ಮರಿಯಪ್ಪ.—ಹೌದು. ಸ್ವಲ್ಪ ಭಾಗದಲ್ಲಿ 500 ಪ್ರಜಾ ಸಂಖ್ಯೆಯಿರುವ ಕಡೆ ಅದನ್ನು ಜಾರಿಗೆ ತಂದಿದೆ. ನಮ್ಮಲ್ಲೂ ಮೊದಮೊದಲು ಐನೂರಲ್ಲ 300 ಪ್ರಜಾ ಸಂಖ್ಯೆಯಿರುವ ಕಡೆಯಲ್ಲೂ ಸ್ಕೂಲುಗಳನ್ನು ಕೊಟ್ಟೆವು.

ಅಧ್ಯಕ್ಷರು.—ಅಲ್ಲಿ ಎಲ್ಲ ಕಡೆಯಲ್ಲೂ ಇದೆ ; ಬಿಜಾಪುರ ಒಂದರಲ್ಲಿಲ್ಲ.

ಶ್ರೀ ಟಿ. ಮರಿಯಪ್ಪ.—ಆದ್ದರಿಂದ ಈ ವಿಚಾರದಲ್ಲಿ ತಾವೆಷ್ಟು ಕುತೂಹಲಿಗಳಾಗಿದ್ದೀರೋ ನಾವು ಅಷ್ಟೇ ಕುತೂಹಲಿಗಳಾಗಿದ್ದೇವೆ. ಆದಷ್ಟು ಜಾಗ್ರತೆ ಪ್ರೈಮರಿ ಪಾಠಶಾಲೆಗಳನ್ನು ಹೆಚ್ಚಿಸಬೇಕೆಂದು ಉದ್ದೇಶವಿದೆ. ಆದರೆ ಹೊಸ ರಾಜ್ಯವಾದಮೇಲೆ ವಿದ್ಯಾಭ್ಯಾಸ ಕ್ಷೇತ್ರದಲ್ಲಿ ಅನೇಕ ಹೊಸ ಸಮಸ್ಯೆಗಳು ಉದ್ಭವಿಸಿವೆ. ನಮ್ಮಲ್ಲಿದ್ದ ಪದ್ಧತಿಯೇಬೇರೆ, ಅಲ್ಲಿದ್ದ ಪದ್ಧತಿಗಳೇಬೇರೆ. ಅಲ್ಲಿ ಶಾಲೆಗಳನ್ನು ಬಹುಮಟ್ಟಿಗೆ ಸ್ಥಳೀಯ ಸಂಸ್ಥೆಗಳೇ ನಡೆಸುವ ವ್ಯವಸ್ಥೆಯಿತ್ತು. ಇಲ್ಲಿ ಸರ್ಕಾರದವರೇ ನಡೆಸುತ್ತಿದ್ದಾರೆ. ಈ ಎಲ್ಲ ಸಮಸ್ಯೆಗಳನ್ನೂ ಬಿಡಿಸುವುದಕ್ಕಾಗಿ integration ಕಮಿಟಿಯೊಂದನ್ನೇರ್ಪಡಿಸಿ ಏಕರೂಪತೆಯನ್ನು ಸಾಧಿಸಬೇಕು, ಮತ್ತು ಆದಷ್ಟು ಮಟ್ಟಿಗೆ ಖಾಸಗಿ ಶಾಲೆಗಳನ್ನು ಜಾಸ್ತಿ ಮಾಡುವುದಕ್ಕೆ ಪ್ರಯತ್ನ ಮಾಡಬೇಕಾದ ಆವಶ್ಯಕತೆಯಿದೆ. ಏಕೆಂದರೆ ಎಲ್ಲ ಖರ್ಚುಗಳನ್ನೂ ಸರ್ಕಾರದವರೇ ಹೊರುವುದು ಕಷ್ಟವೆಂದು ಮಾತ್ರ ನಾನು ಸ್ಪಷ್ಟಮಾಡಬಯಸುತ್ತೇನೆ.

ಶ್ರೀಮತಿ ರುಕ್ಮಿಣಿಯಮ್ಮನವರು ಹೆಣ್ಣುಮಕ್ಕಳ ವಿದ್ಯಾಭ್ಯಾಸಕ್ಕೆ ಮತ್ತು ಅವರ ಹಾಸ್ಟಲುಗಳಿಗೆ ಹೆಚ್ಚಿಗೆ ಹಣವೊದಗಿಸಬೇಕೆಂದು ಹೇಳಿದ್ದಾರೆ. ನ್ಯಾಯ ; ಈ ವಿಷಯದಲ್ಲಿ ಎಲ್ಲರೂ ಹೆಚ್ಚಿನ ನಿಗಾ ತೆಗೆದುಕೊಳ್ಳಬೇಕು. ನಮ್ಮ ಹೆಣ್ಣುಮಕ್ಕಳ ವಿದ್ಯಾಭ್ಯಾಸದ ವಿಷಯದಲ್ಲಿ ನಮಗೆ ಹೆಚ್ಚಿನ ಆಸಕ್ತಿಯಿದೆ. ಅವರು ಮುಂದುವರಿಯಬೇಕೆಂಬುದೇ ನಮ್ಮೆಲ್ಲರ ಆಶಯ.

ಶ್ರೀ ದೀನದಯಾಳುನಾಯ್ಡು ಅವರು ಎಲ್ಲ ಮಿಷನ್ ಸ್ಕೂಲುಗಳನ್ನೂ ಸರ್ಕಾರದವರೇ ವಹಿಸಿಕೊಂಡು ನಡೆಸಬೇಕೆಂದು ಹೇಳಿದ್ದಾರೆ. ಅವರಿಗೆ ನಾನು ಸ್ಪಷ್ಟವಾಗಿ ಹೇಳಬಯಸುತ್ತೇನೆ. ಖಾಸಗಿ ಸಂಸ್ಥೆಗಳನ್ನು ನಡೆಸುವವರೆಲ್ಲಾ ಖಾಸಗಿ ಶಾಲೆಗಳನ್ನು ಸರ್ಕಾರದವರೇ ವಹಿಸಿಕೊಂಡು ನಡೆಸಬೇಕೆಂದರೆ ಬಹಳ ಕಷ್ಟ. ಈಗಿರತಕ್ಕ ಸ್ಥಿತಿಯಲ್ಲಿ ಖಾಸಗಿ ಜನರಿಗೆ ಹೆಚ್ಚಿನ ಉತ್ತೇಜನ ಕೊಟ್ಟು ಖಾಸಗಿಯವರು ಹೆಚ್ಚಿನ ಜವಾಬ್ದಾರಿ ತೆಗೆದುಕೊಳ್ಳುವಂತೆ ಮಾಡಬೇಕೆಂದಿರುವಾಗ, ಅದನ್ನು ತಪ್ಪಿಸಿ ನಾವೇ ವಹಿಸಿಕೊಳ್ಳುವುದು ಸಾಧ್ಯವಲ್ಲದ್ದು. ಯಾವುದಾದರೂ ಸಂಸ್ಥೆಯ ಆಡಳಿತ ವ್ಯವಸ್ಥೆಯಲ್ಲಿ ತಪ್ಪಿದರೆ ಅದನ್ನು ತಿದ್ದುವುದಕ್ಕೆ ಸರ್ಕಾರದವರೇನೋ ಸಿದ್ಧವಾಗಿದ್ದಾರೆ.

Sri V. P. DEENADAYALU NAIDU (Cubbonpet).—One point, Sir. I have received a very gratifying information from the Minister for Education that those institutions which I referred to, have already been taken over and they will be governed as Government institutions.

Sri T. MARIAPPA.—I am only making a general observation. There may be particular institutions which will certainly be taken over. But it is almost impossible to take over all the private institutions. Our finances are so strained that it will be impossible.

Sri V. P. DEENADAYALU NAIDU.—Any institution which stops or ceases to function will have to give one year's notice under the Act. But although the institutions which are about to close have given notice of it about one and a half years back, no action was taken until a letter was addressed.

Sri T. MARIAPPA.—That is only a particular case. I want to answer in a general way so that the members may be aware of the financial difficulties with which we are faced.

ಶ್ರೀಮಾನ್ ವೆಂಕಟೇಗೌಡರು, ಕೊಳ್ಳೇಗಾಲ್ ತಾಲ್ಲೂಕಿನ ಕಷ್ಟವನ್ನು ವಿವರಿಸಿದ್ದಾರೆ. ಒಂದಲ್ಲ ಅನೇಕ ಸಲ ಅದನ್ನೇ ಅವರು ಹೇಳಿದ್ದಾರೆ. ಅವರೂ ಕೂಡ ಎಲ್ಲ ಪಾಠಶಾಲೆಗಳನ್ನೂ ಸರ್ಕಾರದವರೇ ತೆಗೆದುಕೊಳ್ಳಲಿ ಎಂದು ಹೇಳಿದ್ದಾರೆ. ಅಲ್ಲಿ ಹಿಂದೆ ಶಾಲೆಗಳನ್ನು ಡಿಸ್ಟ್ರಿಕ್ಟ್ ಬೋರ್ಡಿನವರು ನಡೆಸುತ್ತಿದ್ದರು. Integration ಆದಮೇಲೆ ಅವೆಲ್ಲಾ ಮೈಸೂರಿಗೆ ಸೇರಿ, ಮೈಸೂರು ಡಿಸ್ಟ್ರಿಕ್ಟ್ ಬೋರ್ಡಿಗೆ ವಹಿಸಲ್ಪಟ್ಟಿವೆ. ಮೈಸೂರಿನಲ್ಲಿ ಡಿಸ್ಟ್ರಿಕ್ಟ್ ಬೋರ್ಡಿನವರು ಅವುಗಳನ್ನು ನಡೆಸುತ್ತಿಲ್ಲವಾದ ಕಾರಣ ಅವುಗಳನ್ನೆಲ್ಲಾ ಸರ್ಕಾರದವರೇ ತೆಗೆದುಕೊಳ್ಳಬೇಕೆಂದು ಅವರು ಒತ್ತಾಯ ಮಾಡುತ್ತಿದ್ದಾರೆ. ಇದನ್ನು ಪರ್ಯಾಲೋಚನೆ ಮಾಡಿ ಏನು ಮಾಡಬೇಕೆಂದು ತೀರ್ಮಾನಿಸುತ್ತೇವೆಂದು ಹೇಳುತ್ತೇವೆ.

ಅಧ್ಯಕ್ಷರೇ, ನಾನಿನ್ನು ಹೆಚ್ಚಿಗೆ ಜವಾಬು ಕೊಡಬೇಕಾದ ಅಗತ್ಯವಿಲ್ಲವೆಂದು ತಿಳಿದಿದ್ದೇನೆ. ಒಂದು ವಿಷಯವನ್ನು ಮಾತ್ರ ಈ ಸಭೆಗೆ ಮನಃಪಿಮಾಡಿಕೊಂಡು ನನ್ನ ಭಾಷಣವನ್ನು ಮುಗಿಸುತ್ತೇನೆ. ನಾನು ಮೊದಲೇ ಈ ಸಭೆಗೆ ಅರಿಕೆ ಮಾಡಿಕೊಂಡ ಹಾಗೆ, ಈಗಿನ ಪಂಚವಾರ್ಷಿಕ ಯೋಜನೆ ಯಶಸ್ವಿಯಾಗಿ ನಡೆಯಬೇಕಾದರೆ ಈ ಸಭೆಯ ಎಲ್ಲ ಸದಸ್ಯರೂ ಪಕ್ಷವೆಂಬ ಭೇದವಿಲ್ಲದೆ ಶ್ರಮಿಸಬೇಕಾಗಿದೆ. ಏಕೆಂದರೆ ತಮ್ಮದಾದರೂ ಉದ್ದೇಶವೇನು ? ಹೊಸ ರಾಜ್ಯವನ್ನು ಚೆನ್ನಾಗಿ ಕಟ್ಟೋಣ ಎಂಬುದೇ ಆಗಿದೆ. ಈ ದೃಷ್ಟಿಯಿಂದ ತಾವೇನು ರಚನಾತ್ಮಕ ಟೀಕೆ ಮಾಡುತ್ತೀರೋ ಅದನ್ನು ಸರ್ಕಾರದವರು ಅಂಗೀಕರಿಸಿ ಸೂಕ್ತವಾದ ಬದಲಾವಣೆ ಮಾಡಿಕೊಂಡು ಈ ದೇಶವನ್ನು ಮುಂದಕ್ಕೆ ತರಬೇಕೆಂದಿದ್ದೇವೆ. ಆಧಾರವಿಲ್ಲದೆ ಟೀಕೆ ಮಾಡುವವರ ವಿಷಯದಲ್ಲಿ ನಾನೇನೂ ಹೇಳಬೇಕಾಗಿಲ್ಲ. ತಾವು ಮಾಡತಕ್ಕ ಟೀಕೆಯೂ ನಮ್ಮನ್ನು ತಿದ್ದಿ ನಾವು ಸರಿಯಾಗಿ ನಡೆದುಕೊಂಡು ಹೋಗುವಂತೆ ಮಾಡಬೇಕೆಂಬುದೇ ಆಗಿದ್ದರೆ ಅದಕ್ಕೆ ನಮ್ಮ ಸಂಪೂರ್ಣ ಪುರಸ್ಕಾರವಿದೆ. ಅಲ್ಲದೆ ಈ ಹೊಸ ಸನ್ನಿವೇಶದಲ್ಲಿ ತಮ್ಮೆಲ್ಲರ ಸಂಪೂರ್ಣ ಸಹಕಾರ ಇನ್ನೂ ಹೆಚ್ಚಿನ ಅವಶ್ಯಕತೆ ಇದೆ. ನೀವು ಬೇರೆ ಪಕ್ಷದವರಾದರೂ ಬೇರೆ ದೇಶದವರೇನಲ್ಲ. ಭಿನ್ನಾಭಿಪ್ರಾಯಗಳು ಕೆಲವಿರಬಹುದು, ಅದರಲ್ಲೂ ಪ್ರಜಾ ಸೋಷಿಯಲಿಸ್ಟ್ ಪಾರ್ಟಿಗೂ ಕಾಂಗ್ರೆಸ್ಸಿಗೂ ತತ್ವಗಳಮೇಲೆ ಅಷ್ಟೇನೂ ವ್ಯತ್ಯಾಸವಿಲ್ಲ. ಹೀಗೆ ideological

(SRI T. MARIAPPA.)

differences ಇಲ್ಲದಿರುವಾಗ ಏಕೆ ಹೀಗೆ ಭಿನ್ನಾಭಿಪ್ರಾಯ ಬರಬೇಕೋ ಗೊತ್ತಿಲ್ಲ. ಈಗ ಈ ಬಡ್ಜೆಟ್ ಚರ್ಚೆ ಮುಗಿದಮೇಲೆ Taxation measures ಬರುವುದಿವೆ. ಅವು ಬಂದಾಗ ತಾವು ಸೂಕ್ತ ಸಲಹೆಗಳನ್ನು ಕೊಡಿ. ಇಂಥಾದ್ದು ಸರಿಯಲ್ಲ, ಅಂಥಾದ್ದು ಸರಿಯೆಂದು ಎತ್ತಿ ತೋರಿಸಿ ಅವನ್ನು ಸರಿಪಡಿಸೋಣ. ಅದು ಬಿಟ್ಟು ರಚನಾತ್ಮಕವಾಗಿಲ್ಲದ ಟೀಕೆಗಳನ್ನು ಮಾಡಿದರೆ ಏನೂ ಪ್ರಯೋಜನವಾಗುವುದಿಲ್ಲ. ಪ್ರಜೆಗಳು ನಿಮ್ಮನ್ನು ನೋಡಿ ಏನು ಹೇಳುತ್ತಾರೆ? ರಚನಾತ್ಮಕ ಟೀಕೆಗಳನ್ನು ಮಾಡಿದ್ದರೆ ಚೆನ್ನಾಗಿತ್ತಲ್ಲವೇ ಎಂದುಕೊಳ್ಳುತ್ತಾರೆ. ಈ ದೃಷ್ಟಿಯಿಂದ ರಚನಾತ್ಮಕ ಟೀಕೆ ಕೊಡಬೇಕೆಂದು ಹೇಳುತ್ತೇನೆ. ಒಳ್ಳೆಯ ಸಲ್ಲತಕ್ಕ ಸಲಹೆಗಳನ್ನು ಕೊಡಿ. ಅವಕ್ಕೆಲ್ಲ ನಮ್ಮ ಪುರಸ್ಕಾರವಿದೆ. ನಿಮ್ಮ ಸಲಹೆಗಳಿಂದ ದೇಶದ ಉತ್ಪತ್ತಿಯನ್ನು ಜಾಸ್ತಿ ಮಾಡುವುದಕ್ಕೆ ನೆರವಾಗಿರಿ. ಪ್ರಾಯಶಃ ತಾವು ತಿಳಿದಿರಬಹುದು ತೆರಿಗೆಗಳನ್ನು ಹಾಕುವುದನ್ನು ವಿರೋಧಿಸಿದರೆ ಜನರ ಮೆಚ್ಚಿಗೆಗೆ ಪಾತ್ರರಾಗುತ್ತೀರಿ ಎಂದು. ಹಾಗೆ ತಿಳಿಯುವುದು ತಪ್ಪು. ಏಕೆಂದರೆ ಯಾವ ದೇಶವನ್ನೂ ತೆರಿಗೆಗಳಿಲ್ಲದೆ ಕಟ್ಟಿಲ್ಲ. ಆದ್ದರಿಂದ ಈ ವಿಷಯದಲ್ಲಿ ತಾವು ಇಲ್ಲಿಯವರೆಗೆ ಹೇಗೆ ಸಹಕರಿಸಿದ್ದೀರೋ ಹಾಗೆ ಮುಂದೆಯೂ ಸಹಕರಿಸುತ್ತೀರೆಂದು ನಂಬಿ ಮತ್ತೊಮ್ಮೆ ರಚನಾತ್ಮಕ ಸಲಹೆಗಳನ್ನು ಕೊಟ್ಟಿರುವವರಿಗೆ, ಲಘುವಾಗಿ ಮಾತನಾಡಿದವರಿಗೆ ಮತ್ತು ಬರೀ ಬಟ್ಟೆ ಹಾಕವುದೊಂದನ್ನೇ ನೋಡಿ ಮಾತನಾಡಿದವರಿಗೆ—ಎಲ್ಲರಿಗೂ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

MYSORE ANATOMY BILL, 1957.

Introduction.

SRI V. VENKATAPPA (Minister for Education).—Sir, I introduce the Mysore Anatomy Bill, 1957 which has been published in the *Mysore Gazette* under rule 48 of the Rules of Procedure and Conduct of Business in the Mysore Legislative Assembly.

MYSORE SALES TAX BILL, 1957.

Motion to refer.

SRI B. K. PUTTARAMIYA (Channapatna).—Sir, I beg to move :

"That the Mysore Sales Tax Bill, 1957, be referred to a Select Committee consisting of—

1. The Minister for Finance
2. Shri K. Kenchappa
3. Shri V. Sreenivasa Setty
4. Shri M. Ramappa
5. Shri L. S. Venkaji Rao
6. Shri S. D. Kothavale
7. Shri A. Bheemappa Naik and
8. The Mover."

SRI T. MARIAPPA (Minister for Finance).—Sir, I move :

"That the Mysore Sales Tax Bill, 1957, be referred to a Select Committee consisting of the following members :

1. The Minister for Finance
2. The Minister for Labour and Legal Affairs
3. Shri Kadidal Manjappa
4. Shri A. Bheemappa Naik
5. Shri D. T. Seetharama Rao
6. Shri K. Puttaswamy
7. Shri A. V. Narasimha Reddy
8. Shri N. Rachiah
9. Shri L. S. Venkaji Rao
10. Shri K. P. Gadag
11. Shri K. F. Patil
12. Shri K. Mallappa
13. Shri S. D. Kothavale
14. Shri Annarao Ganamukhi
15. Shri B. V. Desai
16. Shri K. Kenchappa
17. Shri M. C. Narasimhan
18. Shri B. Basavalingiah
19. Shri R. Nagan Gowda
20. Shri B. K. Puttaramiya
21. Shri Gajanan Pandit

with a direction to present the report within a week."

MR. SPEAKER.—I shall put the first motion. Motion moved:

"That the Mysore Sales Tax Bill, 1957, be referred to a Select Committee consisting of the following members :

1. The Minister for Finance
2. Shri K. Kenchappa
3. Shri V. Sreenivasa Setty
4. Shri M. Ramappa
5. Shri L. S. Venkaji Rao
6. Shri S. D. Kothavale
7. Shri A. Bheemappa Naik and
8. The Mover (Shri B. K. Puttaramiya)."